ಜನಮನದ ದನಿ

# ಪ್ರಜೋದಯ


ಸಂಪಾದಕ : ಜೆ.ಆರ್. ಕೆಂಚೇಗೌಡ

27 ಡಿಸೆಂಬರ್ 2025 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 285 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629





ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ ಅವರನ್ನೇ ಹೋಲುವ ಇನ್ನೋರ್ವ ಆಟಗಾರ ಕಾಣಿಸಿಕೊಂಡು ಅಚ್ಚರಿ ಮೂಡಿಸಿದ್ದಾನೆ.





ಸಂಘಸಂಸ್ಕಾರದಿಂದಲೇರಾಜಕಾರಣವನ್ನು ಸಂಸ್ಕರಿಸಿದ ಅಟಲ್ ಜೀ » 2





ಪರಿಸರ ಸಂರಕ್ಷಣೆ ಕುರಿತು ಅರಿವು ಅಗತ್ಯ » 3





ದೇಶದ 20 ಮಕ್ಕಳಿಗೆ ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ » 4


# ಸ್ಥಳೀಯ ಸಂಸ್ಥೆ ಚುನಾವಣೆಗೆ ಮೈತ್ರಿ ಕಷ್ಟ

## ಲೋಕಸಭೆ, ವಿಧಾನಸಭೆಗೆ ಬಿಜೆಪಿಯೊಂದಿಗೆ ಹೊಂದಾಣಿಕೆ : ದೇವೇಗೌಡರ ಸ್ಪಷ್ಟನೆ

• ಪ್ರಜೋದಯ ವರದಿ

**ಬೆಂಗಳೂರು:** ಲೋಕಸಭೆ, ವಿಧಾನ ಸಭೆ ಚುನಾವಣೆಯಲ್ಲಿ ಬಿಜೆಪಿ ಯೊಂದಿಗಿನ ಮೈತ್ರಿ ಮುಂದುವರೆಯಲಿದೆ. ನಗರ, ಸ್ಥಳೀಯ ಸಂಸ್ಥೆಗಳಲ್ಲಿ ಹೊಂದಾಣಿಕೆ ಕಷ್ಟವಾಗುತ್ತದೆ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ ಜೊತೆ ಹೊಂದಾಣಿಕೆ ಕಷ್ಟವಾಗಲಿದೆ. ನಮ್ಮ ಶಕ್ತಿ ಇರುವ ಕಡೆ ನಾವು ಹೋರಾಟ ಮಾಡುತ್ತೇವೆ. ಸ್ಥಳೀಯ ಸಂಸ್ಥೆಗಳ ಹೊಂದಾಣಿಕೆ ವಿಚಾರವನ್ನು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಜೊತೆ ಚರ್ಚೆ ಮಾಡಲು ಸಾಧ್ಯವೇ, ಈ ವಿಚಾರದಲ್ಲಿ ಈಗಾಗಲೇ ಬಿಜೆಪಿ ರಾಜ್ಯಾಧ್ಯಕ್ಷರು ಅವರ ನಿಲುವನ್ನು ಸ್ಪಷ್ಟಪಡಿಸಿದ್ದಾರೆಂದು ಹೇಳಿದರು.



ಜ.25 ರಂದು ಮೈಸೂರಿನಲ್ಲಿ ಅಹಿಂದ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಡುತ್ತಿದ್ದಾರೆ. ಯಾವ ಚಿಹ್ನೆಯಡಿ ಅವರು ಮಾಡುತ್ತಿದ್ದಾರೆ. ಅಹಿಂದ ಬಗ್ಗೆ ವ್ಯಾಖ್ಯಾನ ಮಾಡಿ ವಿವರಿಸುವುದು ಕಷ್ಟ. ಮುಖ್ಯಮಂತ್ರಿಯಾಗಿದ್ದವರು ಅಹಿಂದ ನಾಯಕರೇ ಆಗಿದ್ದರೆ ಒಂದು ಕ್ಷೇತ್ರ ಹುಡುಕಲು ಎಷ್ಟು ಚರ್ಚೆ ಮಾಡಿದರು. ಮೈಸೂರು, ಬಾದಾಮಿ, ಕೋಲಾರ ಎಲ್ಲಿ ಸ್ಪರ್ಧಿಸ ಬೇಕೆಂದು ಚರ್ಚಿಸಿದರು. ಅಹಿಂದ ನಾಯಕರೇ ಆಗಿದ್ದರೆ ರಾಜ್ಯದ ಯಾವುದೇ ಕ್ಷೇತ್ರದಲ್ಲಾದರೂ ಗೆಲ್ಲಬಹುದಾಗಿತ್ತು. ಕಳೆದ ಚುನಾವಣೆಯಲ್ಲಿ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರಿಗೆ ಕ್ಷೇತ್ರ ಬಿಟ್ಟುಕೊಡ ಬೇಕಾಯಿತು ಎಂದು ತಿರುಗೇಟು ನೀಡಿದರು.

> "ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ನಾವು ಪ್ರತ್ಯೇಕವಾಗಿ ಹೋರಾಟ ಮಾಡುತ್ತೇವೆ. ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಎನ್‌ಡಿಎ ಜೊತೆಗೆ ಇರುತ್ತೇವೆ. ವಿಧಾನ ಪರಿಷತ್ 4 ಸ್ಥಾನಗಳ ಚುನಾವಣೆಯಲ್ಲಿ ಒಂದು ಸ್ಥಾನ ಜೆಡಿಎಸ್‌ಗೆ, 3 ಸ್ಥಾನ ಬಿಜೆಪಿಗೆ ನೀಡುವ ಬಗ್ಗೆ ಪ್ರಾಥಮಿಕ ಚರ್ಚೆಯಾಗಿದೆ.
> -ಹೆಚ್.ಡಿ.ದೇವೇಗೌಡ,

### ಹಾಸನದಲ್ಲಿ ಜನವರಿ 23ರಂದು ಸಮಾವೇಶ

ಜ.23 ರಂದು ಹಾಸನದಲ್ಲಿ ಪಕ್ಷದ ಸಮಾವೇಶ ಮಾಡುತ್ತೇವೆ. ಜ.24 ರಂದು ಬಾಗಲಕೋಟೆಯಲ್ಲಿ ಸಭೆ ಮಾಡಲು ತೀರ್ಮಾನಿಸಿದ್ದೇವೆ. ಜ.18 ರಂದು ಬೆಂಗಳೂರಿನಲ್ಲಿ ಪಕ್ಷದ ಕಾರ್ಯಕರ್ತರ ಸಭೆಯನ್ನು ನಡೆಸಲಾಗುವುದೆಂದು ದೇವೇಗೌಡರು ಹೇಳಿದರು.

ಸಿದ್ದರಾಮಯ್ಯ ಅವರು ನನ್ನ ಬಗ್ಗೆ ಕಠಿಣವಾಗಿ ಮಾತನಾಡಿದ್ದಾರೆ. ಅವರ ಹಿರಿಯ ಮಗ ನಿಧನರಾದಾಗ ಮನೆಗೆ ಹೋಗಿದ್ದೆ. ಈ ವಯಸ್ಸಿನಲ್ಲೂ ಎಷ್ಟು ದುಡಿಯುತ್ತೀರಿ ಎಂದು ಕೇಳಿದ್ದರು. ನೀವೆಲ್ಲಾ ಪಕ್ಷ ಬಿಟ್ಟು ಹೋದ ಮೇಲೆ ಪಕ್ಷ ಉಳಿಯಲು ದುಡಿಯುತ್ತಿದ್ದೇನೆಂದು ಹೇಳಿದ್ದೆ. ಈಗ ಎರಡನೇ ಪುತ್ರನನ್ನು ರಾಜಕೀಯಕ್ಕೆ ತಂದಿದ್ದಾರೆ. ಒಳಮೀಸಲಾತಿಯಲ್ಲಿ ಯಾವ ಯಾವ ಜಾತಿಗೆ ಎಷ್ಟೆಷ್ಟು ಮೀಸಲಾತಿ ಕೊಟ್ಟಿದ್ದೀರಿ ಎಂಬುದನ್ನು 16 ಬಜೆಟ್ ಮಂಡಿಸಿದ ಸಿದ್ದರಾಮಯ್ಯನವರು ಹೇಳ ಬೇಕೆಂದು ಆಗ್ರಹಿಸಿದರು.

**ಮಹಿಳಾ, ಮುಸ್ಲಿಂ ಮೀಸಲಾತಿ ತಂದಿದ್ದು ಯಾರು ?**

ದೇಶದಲ್ಲಿ ನಗರ, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ ತಂದವರು ಯಾರು, ಮುಸ್ಲಿಮರಿಗೆ ಮೀಸಲಾತಿ ಕಲ್ಪಿಸಿದವರು ಯಾರೆಂದು ಪ್ರಶ್ನಿಸಿದ ಅವರು, ಕೇರಳದಲ್ಲಿ ಜೆಡಿಎಸ್ ಪಕ್ಷ ಎಡಪಂಥೀಯ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.


» ನಾಲ್ಕನೇ ಪುಟದಲ್ಲಿ


# ಐಎಎಸ್ ಅಧಿಕಾರಿಗಳ ಆಸ್ತಿ ವಿವರ ಸಲ್ಲಿಕೆ ಕಡ್ಡಾಯ




• ಪ್ರಜೋದಯ ವರದಿ

**ನವದೆಹಲಿ:** ಭಾರತೀಯ ಆಡಳಿತ ಸೇವೆಯ (ಐಎಎಸ್) ಅಧಿಕಾರಿಗಳು ಸಕಾಲದಲ್ಲಿ ತಮ್ಮ ಆಸ್ತಿ ವಿವರಗಳನ್ನು ಸಲ್ಲಿಸದಿದ್ದರೆ ಬಡ್ತಿ ನಿರಾಕರಣೆ ಸೇರಿ ಶಿಸ್ತು ಕ್ರಮ ಎದುರಿಸಬೇಕಾಗುತ್ತದೆಂದು ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ.

ಎಲ್ಲಾ ಅಧಿಕಾರಿಗಳು ಮುಂದಿನ ಜನವರಿ 31ರೊಳಗಾಗಿ ಸ್ಥಿರಾಸ್ತಿಯ ವಿವರಗಳನ್ನು ಸಲ್ಲಿಸಬೇಕೆಂದು ಕೇಂದ್ರ ಸಿಬ್ಬಂದಿ ಸಚಿವಾಲಯ ಪ್ರಕಟಣೆ ಹೊರಡಿಸಿದೆ. ಮುಂದಿನ ವೇತನ ಶ್ರೇಣಿಗೆ ನೌಕರರನ್ನು ಪರಿಗಣಿಸಬೇಕಾದರೆ ಸ್ಥಿರಾಸ್ತಿಗಳ ವಿವರ ಸಲ್ಲಿಸುವುದನ್ನು ಕಡ್ಡಾಯಗೊಳಿಸಿ ನಿಯಮಗಳಿಗೆ ತಿದ್ದುಪಡಿ ಮಾಡಲಾಗಿದೆ.

# ನಾಯಕತ್ವ ಬಿಕ್ಕಟ್ಟು: ರಾಹುಲ್ ಕೈ ಸೇರಿದೆ ರಹಸ್ಯ ವರದಿ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯ ಕಾಂಗ್ರೆಸ್‌ನಲ್ಲಿ ಬಿರುಗಾಳಿ ಎಬ್ಬಿಸಿರುವ ನಾಯಕತ್ವ ಬದಲಾವಣೆ ವಿಚಾರವಾಗಿ ಈ ವರೆಗೆ ತುಟಿ ಬಿಚ್ಚದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಚುನಾವಣಾ ತಂತ್ರಜ್ಞ ಸುನಿಲ್ ಕಾನುಗೋಲ್ ಸೇರಿ ವಿವಿಧ ಮೂಲಗಳಿಂದ ರಹಸ್ಯ ವರದಿ ತರಿಸಿಕೊಂಡಿದ್ದಾರೆಂದು ತಿಳಿದುಬಂದಿದೆ.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆಯ ನಿರ್ಧಾರವನ್ನು ರಾಹುಲ್ ಗಾಂಧಿ ಸದ್ಯಕ್ಕೆ ತಡ ಹಿಡಿದಿದ್ದಾರೆ. ಮಹತ್ತರ ತೀರ್ಮಾನಕ್ಕೆ ಇದು ಸೂಕ್ತ ಸಮಯವಲ್ಲವೆಂದು ಅವರು ಹೇಳಿದ್ದಾರೆ. ಇತ್ತೀಚೆಗೆ ದೆಹಲಿಗೆ ತೆರಳಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿಲ್ಲವಾದರೂ, ಸಿದ್ದರಾಮಯ್ಯ ಅವರ ಬೆಂಬಲಿಗ ಬಿ.ಕೆ. ಹರಿಪ್ರಸಾದ್ ಮತ್ತು ಸಚಿವ ಕೆ.ಜೆ. ಜಾರ್ಜ್ ಅವರನ್ನು ಭೇಟಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ದೆಹಲಿ ಪ್ರವಾಸ ಕೈಗೊಂಡಿದ್ದಾರೆ. ಡಿ.27 ರಂದು ನಡೆಯಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಸಭೆಯ ಹೊರತಾಗಿ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿ ಪಕ್ಷದ ನಾಯಕರನ್ನು ಭೇಟಿಯಾ ಗಲಿದ್ದಾರೆ.

ಇದೆ ವೇಳೆ ಕೇಂದ್ರ ಸಚಿವರನ್ನು ಭೇಟಿ ಮಾಡಿ ಕರ್ನಾಟಕಕ್ಕೆ ಸಂಬಂಧಿಸಿದ ಯೋಜನೆಗಳ ಬಗ್ಗೆ ಚರ್ಚಿಸುವ ಸಾಧ್ಯತೆ ಇದೆ. ನಾಯಕತ್ವ ಬದಲಾವಣೆ ಅಥವಾ ಸಂಪುಟ ಪುನಾರಚನೆ ವಿಷಯವನ್ನು ಕೈಗೆತ್ತಿಕೊಳ್ಳುವ ಸಾಧ್ಯತೆ ಕಡಿಮೆ. ರಾಹುಲ್ ಗಾಂಧಿ ಅವರು ತಮ್ಮ ಯುರೋಪ್ ಪ್ರವಾಸದಿಂದ ಹಿಂದಿರುಗಿದ ನಂತರ ಮುಖ್ಯಮಂತ್ರಿ ಮತ್ತೊಮ್ಮೆ ದೆಹಲಿಗೆ ಭೇಟಿ ನೀಡಿ ಸಂಪುಟ ಪುನಾರಚನೆಗೆ ಅನುಮೋದನೆ ಪಡೆಯುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.


# ಶವ ಗುರುತಿಸಲು ಡಿಎನ್‌ಎ ಪರೀಕ್ಷೆ

## ಬಸ್ ದುರಂತದಲ್ಲಿ ಸಜೀವ ದಹನರಾದ ಯುವತಿಯರ ಮೃತದೇಹ ಪತ್ತೆ ಮಾಡಲು ಪೋಷಕರಲ್ಲಿ ಗೊಂದಲ

• ಪ್ರಜೋದಯ ವರದಿ

**ಹಾಸನ:** ಬಸ್ ದುರಂತದಲ್ಲಿ ಸಜೀವ ದಹನವಾಗಿದ್ದ ಜಿಲ್ಲೆಯ ಇಬ್ಬರು ಯುವತಿಯರ ಶವಗಳು ಸಿಕ್ಕಿದ್ದರೂ, ನವ್ಯ ಹಾಗು ಮಾನಸ ಅವರ ಶವಗಳ ಗುರುತು ಹಿಡಿಯಲು ಇಬ್ಬರ ತಂದೆ-ತಾಯಿಯನ್ನು ಕರೆಯಿಸಿದ್ದರೂ ಸಾಧ್ಯವಾಗಿಲ್ಲ. ಹೀಗಾಗಿ ಶವಗಳ ಡಿಎನ್‌ಎ ಪರೀಕ್ಷೆ ಒಳಪಡಿಸಲು ನಿರ್ಧರಿಸಲಾಗಿದೆ.

ಕೊರಳಿನಲ್ಲಿದ್ದ ಚೈನ್ ಮೂಲಕ ಪತ್ತೆ ಮಾಡಲು ಮುಂದಾಗಿದ್ದರೂ, ಇಬ್ಬರೂ ಆತ್ಮೀಯ ಸ್ನೇಹಿತರಾಗಿದ್ದರಿಂದ ಪರಸ್ಪರ ಆಭರಣಗಳನ್ನು ಬದಲು ಮಾಡಿಕೊಳ್ಳುತ್ತಿದ್ದರೆಂದು ಕುಟುಂಬಸ್ಥರು ತಿಳಿಸಿದ್ದರಿಂದ ಶವಗಳ ಪತ್ತೆ ಮಾಡಲು ಗೊಂದಲ ಸೃಷ್ಟಿ ಆಗಿದೆ. ಹಾಗಾಗಿ, ಅಂತಿಮವಾಗಿ ಅವರ ಅಸ್ಥಿಪಂಜರದ ಮೂಳೆಗಳನ್ನು ಅವರ ಸಂಬಂಧಿಕರ ರಕ್ತದ ಸ್ಯಾಂಪಲ್‌ನಿಂದ ಡಿಎನ್‌ಎ ಪರೀಕ್ಷೆ ಮಾಡಿಸಲು



ಪೊಲೀಸರು ನಿರ್ಧರಿಸಿದ್ದಾರೆ. ಡಿಎನ್‌ಎ ಪರೀಕ್ಷೆಯಿಂದ ಎರಡು ಅಸ್ಥಿಪಂಜರಗಳಲ್ಲಿ ಯಾರು ನವ್ಯಾ, ಯಾರು ಮಾನಸ ಎಂಬುದು ತಿಳಿದು ಬರಲಿದೆ.

**ಸಾವಿನಲ್ಲೂ ಒಂದಾದ ಗೆಳತಿಯರು**

ಮಾನಸ ಹಾಗು ನವ್ಯ ಒಂದೇ ರೀತಿಯ ಬಟ್ಟೆ ತೆಗೆದುಕೊಳ್ಳುತ್ತಿದ್ದರು. ಒಂದೇ ರೀತಿಯ ಆಭರಣ ಧರಿಸುತ್ತಿದ್ದರು. ಒಟ್ಟಿಗೆ ಇದ್ದು, ಒಂದೇ ಕಡೆ ಕೆಲಸ ಮಾಡುತ್ತಿದ್ದರು. ಇಬ್ಬರು ಓದಿದ್ದು ಒಂದೇ ಕಾಲೇಜು. ಎಲ್ಲಿಗೆ ಹೋಗಲಿ, ಊರಿಗೆ ಬರಲಿ ಒಟ್ಟಿಗೆ ಓಡಾಡುತ್ತಿದ್ದರು. ಚಿಕ್ಕವಯಸ್ಸಿನಿಂದ


» ನಾಲ್ಕನೇ ಪುಟದಲ್ಲಿ


# ದ್ವಿತೀಯ ಪಿಯು ಫಲಿತಾಂಶ ಸುಧಾರಣೆಗೆ ಅವಿರತ ಶ್ರಮ

## ಜಿಲ್ಲೆಯ 15 ಸಾವಿರ ಮಕ್ಕಳು ಪರೀಕ್ಷೆಗೆ ನೋಂದಣಿ | ಹಾಜರಾತಿ ನೀಡದ ಸಂಸ್ಥೆಗಳಿಗೆ ನೋಟೀಸ್ | ಜ.3ರಿಂದ ಪೂರ್ವ ಸಿದ್ಧತಾ ಪರೀಕ್ಷೆ

• ಪ್ರಜೋದಯ ವರದಿ

**ಹಾಸನ:** ಕಳೆದ ಬಾರಿ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಯಲ್ಲಿ ರಾಜ್ಯಕ್ಕೆ 11 ಸ್ಥಾನ ಪಡೆದು ಶೈಕ್ಷಣಿಕವಾಗಿ ಹಿಮ್ಮುಖವಾಗಿ ಚಲಿಸುತ್ತಿರುವ ಜಿಲ್ಲೆಯನ್ನು ಈ ಬಾರಿಯಾದರೂ ಟಾಪ್ 3 ಸ್ಥಾನಗಳಲ್ಲಿ ಕೂರಿಸಬೇಕೆಂಬ ಉದ್ದೇಶದಿಂದ ಪದವಿ ಪೂರ್ವ ಶಿಕ್ಷಣ ಇಲಾಖೆ ಅವಿರತ ಶ್ರಮ ವಹಿಸುತ್ತಿದೆ.

2026ರ ಏ.16 ರಿಂದ ವಾರ್ಷಿಕ ಪರೀಕ್ಷೆಗಳು ನಡೆಯಲಿದ್ದು, ಅದಕ್ಕಾಗಿ ಈಗಿನಿಂದಲೇ ತಯಾರಿ ಮಾಡಿಕೊಳ್ಳಲಾಗುತ್ತಿದೆ. ಖಾಸಗಿ, ಅನುದಾನಿತ ಹಾಗು ಸರ್ಕಾರಿ ಕಾಲೇಜುಗಳಲ್ಲಿ ಫಲಿತಾಂಶ ವೃದ್ಧಿಗೆ ಹತ್ತು ಹಲವು ಯೋಜನೆ ಹಾಕಿಕೊಳ್ಳಲಾಗಿದೆ. ಎಲ್ಲಾ ಕಾಲೇಜುಗಳಲ್ಲಿ ಪಠ್ಯ ಬೋಧನೆ ಮುಕ್ತಾಯವಾಗಿದ್ದು, 27 ವಿಷಯಗಳ ಪುನರಾವರ್ತನೆ ಶುರುವಾಗಿದೆ. ಜನವರಿ 3 ರಿಂದ ಮೊದಲ ಪೂರ್ವ ಸಿದ್ಧತಾ ಪರೀಕ್ಷೆ ಆರಂಭವಾಗಲಿದೆ. ಆ ಹಿನ್ನಲೆಯಲ್ಲಿ ಉಪನ್ಯಾಸಕರು ಹಾಗು ಇಲಾಖೆ ಅಧಿಕಾರಿಗಳು ಅಂತಿಮ ಹಂತದ ಸಿದ್ಧತೆಯಲ್ಲಿ ತೊಡಗಿದ್ದಾರೆ.




**ಖಾಸಗಿ ಕಾಲೇಜುಗಳಿಗೆ ನೋಟೀಸ್**

ಈ ಬಾರಿ ಫಲಿತಾಂಶ ಸುಧಾರಣೆ ಮಾತ್ರವಲ್ಲದೆ ವಿದ್ಯಾರ್ಥಿಗಳ ಹಾಜರಾತಿಗೂ ವಿಶೇಷ ಗಮನ ಹರಿಸಲಾಗಿದೆ. ಜಿಲ್ಲೆಯಲ್ಲಿ 69 ಖಾಸಗಿ ಹಾಗು 78 ಸರ್ಕಾರಿ ಕಾಲೇಜುಗಳಿದ್ದು, 15 ಸಾವಿರ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಆದರೆ, ಖಾಸಗಿ ಕಾಲೇಜುಗಳಲ್ಲಿ ಹಾಜರಾತಿ ದಾಖಲಿಸುವಲ್ಲಿ ವಿಳಂಬವಾಗುತ್ತಿರುವುದರಿಂದ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರು ಸೋಮಾರಿತನ ಪ್ರದರ್ಶಿಸುವ ಸಂಸ್ಥೆಗಳಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡುತ್ತಿದ್ದಾರೆ. ದಿನಕ್ಕೆ ಕನಿಷ್ಠ ಎರಡು ಕಾಲೇಜುಗಳಿಗಾದರೂ ನೋಟೀಸ್ ಜಾರಿ ಮಾಡುವುದು ಅಲಿಖಿತ ನಿಯಮವಾಗಿದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಜರಾತಿಯನ್ನು ನಿತ್ಯ ಪರಿಶೀಲಿಸುತ್ತಿರುವುದರಿಂದ ಬೆಳಿಗ್ಗೆ 11 ಗಂಟೆಯ ಒಳಗೆ ಪೋರ್ಟ್‌ಲ್‌ನಲ್ಲಿ ಅಪ್ಲೋಡ್ ಆಗಿರಬೇಕು. ಈ ವಿಚಾರದಲ್ಲಿ ಶೇ.24 ರಷ್ಟು ಹಾಜರಾತಿ ಕೊರತೆ ಕಂಡು ಬರುತ್ತಿದೆ. ಶೇ. 70ರಷ್ಟು ಹಾಜರಾತಿ ಕಡಿಮೆ ಇದ್ದರೆ ಅಂತಹ ವಿದ್ಯಾರ್ಥಿಗಳನ್ನು ಪರೀಕ್ಷೆಯಿಂದ ಹೊರಗಿಡಲು ತೀರ್ಮಾನಿಸ ಲಾಗಿದೆ. ಮಗು ಪರೀಕ್ಷೆ ಬರೆಯಬೇಕೆಂದರೆ ಹಾಜರಾತಿ ಮಾತ್ರವಲ್ಲದೆ ಕಾಲೇಜಿನಲ್ಲಿ ನಡೆಸುವ ಎರಡು ಪರೀಕ್ಷೆಗೆ ಹಾಜರಾಗಬೇಕು, ಪ್ರಾಜೆಕ್ಟ್ ಕೆಲಸ ಮಾಡಿರಬೇಕು ಎನ್ನುವುದು ಕಡ್ಡಾಯ ನಿಯಮ. ಸರ್ಕಾರಿ ಕಾಲೇಜುಗಳ ಹಾಜರಾತಿ ಶೇ.85 ಹಾಗು ಖಾಸಗಿ ಕಾಲೇಜು ಗಳಲ್ಲಿ ಶೇ. 83 ರಷ್ಟಿದ್ದು, ಕಾಲೇಜಿನಿಂದ ಬಹಳ ದಿನಗಳವರೆಗೆ ದೂರವಿರುವ ಮಕ್ಕಳಿಗೆ ಹಾಲ್ ಟಿಕೆಟ್ ಸಿಗುವುದು ಅನುಮಾನ.

**ಪಾಸಿಂಗ್ ಪ್ಯಾಕೇಜ್‌ಗೆ ಕ್ರಮ**

ಪಿಯುಸಿ ವಿದ್ಯಾರ್ಥಿಗಳಿಗೆ ಈ ವರ್ಷದ ಪರೀಕ್ಷೆ ಸ್ವಲ್ಪ ಕಠಿಣವಾಗಿರಲಿದೆ. ನೀಲ ನಕ್ಷೆ ಸಂಪೂರ್ಣ ಬದಲಾಗಿರುವುದರಿಂದ ಮಕ್ಕಳನ್ನು ಅದಕ್ಕೆ ಸನ್ನದ್ಧರನ್ನಾಗಿಸಬೇಕಿದೆ. ಇಲಾಖೆಯಿಂದಲೇ 2 ಪೂರ್ವ ಸಿದ್ಧತಾ ಪರೀಕ್ಷೆ ನಡೆಸಲಾಗುತ್ತಿದೆ. ಒಬ್ಬ ವಿದ್ಯಾರ್ಥಿಯೂ ಅನುತ್ತೀರ್ಣ ಆಗಬಾರದೆಂಬ ನಿಟ್ಟಿನಲ್ಲಿ ಕ್ರಮ ವಹಿಸಿರುವ ಉಪನ್ಯಾಸಕರು ಪಾಸಿಂಗ್ ಪ್ಯಾಕೇಜ್ ಕ್ರಮದ ಮೊರೆ ಹೋಗಿದ್ದಾರೆ. ವಿದ್ಯಾರ್ಥಿಗಳು ಅಧಿಕ ಅಂಕ ಗಳಿಸದಿದ್ದರೂ, ಕನಿಷ್ಠ ತೇರ್ಗಡೆಯಾಗುವಷ್ಟರ ಮಟ್ಟಿಗೆ ಪರಿಪೂರ್ಣತೆ ಸಾಧಿಸಬೇಕು. ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಯಾವ ವಿಷಯದಲ್ಲಿ ನಿರಾಸಕ್ತಿ ಹೊಂದಿದೆ ಎಂದು ಗೊತ್ತಾಗುತ್ತದೆ. ಆ ಬಳಿಕ ತರಬೇತಿಗೊಳಿಸಲು ಕ್ರಮ ವಹಿಸ ಲಾಗಿದೆ.

**ಮಕ್ಕಳ ಮೇಲೆ ಹೆಚ್ಚಿದ ಒತ್ತಡ**

ದ್ವಿತೀಯ ಪಿಯು ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲೇಬೇಕೆಂದು ಕೆಲವು ಖಾಸಗಿ ಕಾಲೇಜುಗಳು ಮಕ್ಕಳ ಮೇಲೆ ಒತ್ತಡ ಹೇರುತ್ತಿದ್ದಾರೆಂಬ ಆರೋಪಗಳು ಕೇಳಿ ಬಂದಿವೆ. ಪರೀಕ್ಷೆಗೆ ಕೆಲವೇ ತಿಂಗಳು ಬಾಕಿ ಇರುವುದರಿಂದ ವ್ಯಾಸಂಗವನ್ನಷ್ಟೇ ಆದ್ಯತೆಯಾಗಿರಿಸಿ ತೊಂದರೆ ನೀಡಲಾಗುತ್ತಿದೆ. ಅದು ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಇಲಾಖೆ ಅಧಿಕಾರಿಗಳು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಸಂಸ್ಥೆಗಳಿಗೆ ಸೂಚನೆ ನೀಡಬೇಕೆಂದು ಪೋಷಕರೊಬ್ಬರು ಆಗ್ರಹಿಸಿದರು.

# ದೇವೇಗೌಡರ ನೇತೃತ್ವದಲ್ಲಿ ಡಿ.29ರಂದು ಜೆಡಿಎಸ್ ಕಾರ್ಯಕರ್ತರ ಸಭೆ

## ಜನವರಿಯಲ್ಲಿ ಜೆಡಿಎಸ್ ಬೃಹತ್ ಸಮಾವೇಶ: ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಜನವರಿಗೆ ಬೃಹತ್ ಜೆಡಿಎಸ್ ಸಮಾವೇಶ ನಡೆಸುವ ಸಂಬಂಧ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಡಿ.29ರಂದು ನಗರದಲ್ಲಿ ಜೆಡಿಎಸ್ ಕಾರ್ಯಕರ್ತರ ಸಭೆ ನಡೆಯಲಿದೆ ಎಂದು ಜಿಲ್ಲಾಧ್ಯಕ್ಷ ಕೆ.ಎಸ್.ಲಿಂಗೇಶ್ ಅವರು ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.29ರಂದು ಬೆಳಿಗ್ಗೆ 11 ಗಂಟೆಗೆ ನಗರದ ಜ್ಞಾನಾಕ್ಷಿ ಕಲ್ಯಾಣ ಮಂಟಪದಲ್ಲಿ ಸಭೆ ನಡೆಯಲಿದೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಅಧ್ಯಕ್ಷತೆ ವಹಿಸುವರು. ಜಿಲ್ಲೆಯ ಹಾಲಿ ಮತ್ತು ಶಾಸಕರು, ಪರಾಜಿತ ಅಭ್ಯರ್ಥಿಗಳು, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷರು, ಸದಸ್ಯರು, ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗು ಸದಸ್ಯರು, ಪಕ್ಷದ ಮುಖಂಡರು, ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಮುಂದಿನ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಯಲಿದೆ. ಅಂತೆಯೇ ಗ್ರಾಮ ಪಂಚಾಯಿತಿ ಚುನಾವಣೆಯನ್ನೂ ನಾವು ಎದುರಿಸಬೇಕಿದೆ. ಅದಕ್ಕಾಗಿ ಕಾರ್ಯಕರ್ತರನ್ನು ಹುರುದುಂಬಿಸಲು ಸ್ವತಃ




ದೇವೇಗೌಡರೇ ಅಖಾಡಕ್ಕೆ ಇಳಿಯುತ್ತಿದ್ದಾರೆ. ಎದುರಾಳಿ ಪಕ್ಷದವರು ಎಷ್ಟೇ ಸಮಾವೇಶ ಮಾಡಿದರೂ, ಜೆಡಿಎಸ್‌ನ ಅಲುಗಾಡಿಸಲು ಆಗುವುದಿಲ್ಲ. ಈ ಜಿಲ್ಲೆ ದೇವೇಗೌಡರ ಜನ್ಮಸ್ಥಳ ಜೊತೆಗೆ ಕಾರ್ಯಕ್ಷೇತ್ರ. ಹೀಗಾಗಿ ಪಕ್ಷಕ್ಕೆ ಸದಾ ಬಲ, ಚೈತನ್ಯ ನೀಡುವ ದೊಡ್ಡ ಪಡೆಯೇ ಇದೆ ಎಂದರು.

ದೇವೇಗೌಡರು ತಮ್ಮ ವಯಸ್ಸಿನಲ್ಲಿ ವಿಶ್ರಾಂತಿ ಜೀವನ ನಡೆಸದೆ ಕ್ರಿಯಾಶೀಲವಾಗಿ ಓಡಾಡುವ ಮೂಲಕ ಜನಸೇವೆ, ದೇಶ ಸೇವೆ ಮಾಡುತ್ತಿದ್ದಾರೆ. ಹೆಚ್.ಡಿ.ದೇವೇಗೌಡರು, ಹೆಚ್.ಡಿ.ರೇವಣ್ಣ, ಹೆಚ್.ಡಿ.ಕುಮಾರಸ್ವಾಮಿ ಅವರು ಈ ಜಿಲ್ಲೆಗೆ ಸಾಕಷ್ಟು ಕೊಡುಗೆ ಕೊಟ್ಟಿದ್ದಾರೆ. ಅದು ನಮ್ಮ ಕೈ ಹಿಡಿಯಲಿದೆ. ಜನರ ಆಶೀರ್ವಾದ ಇರೋವರೆಗೂ ನಮ್ಮ ಪಕ್ಷ ಗಟ್ಟಿಯಾಗಿರಲಿದೆ. ಇದನ್ನು ಮತ್ತಷ್ಟು ಬಲಗೊಳಿಸಲು ಜನವರಿಯಲ್ಲಿ ಬೃಹತ್ ಸಮಾವೇಶ ನಡೆಸಲು ಯೋಜಿಸಲಾಗಿದೆ. ರೇವಣ್ಣ ಆದಿಯಾಗಿ ನಮ್ಮ ನಾಯಕರ ಜೊತೆ ಚರ್ಚಿಸಿ ದಿನಾಂಕ ನಿಗದಿಪಡಿಸಲಾಗುವುದೆಂದು ಹೇಳಿದರು.

ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದರೂ, ಬೆಳಗಾವಿ ಅಧಿವೇಶನದಲ್ಲಿ ಹಾಸನಲ್ಲಿರುವುದು ಜೆಡಿಎಸ್-ಕಾಂಗ್ರೆಸ್ ಎರಡೇ ಪಕ್ಷಗಳು ಎಂಬ ರೇವಣ್ಣ ಹೇಳಿಕೆಗೆ ಪ್ರತಿಕ್ರಿಯಿಸಿ, ಮೈತ್ರಿ ಬಗ್ಗೆ ದೊಡ್ಡವರು ತೀರ್ಮಾನ


» ನಾಲ್ಕನೇ ಪುಟದಲ್ಲಿ


# ಮಕ್ಕಳ ಸಮಸ್ಯೆ ಆಲಿಸಿದ ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಹಾಸನ:** ಕಟ್ಟಾಯ ಹೋಬಳಿ ಶೆಟ್ಟಿಹಳ್ಳಿ ವೃತ್ತದ ಬಳಿ ಸೂಕ್ತ ಸಮಯಕ್ಕೆ ಬಸ್ ಬಾರದೆ ಪರಿತಪಿಸುತ್ತಿದ್ದ ವಿದ್ಯಾರ್ಥಿಗಳ ಸಮಸ್ಯೆಗೆ ಶಾಸಕ ಸಿಮೆಂಟ್ ಮಂಜು ಸ್ಪಂದಿಸಿದ್ದಾರೆ.

ಕಾರ್ಯನಿಮಿತ್ತ ಕಾರಿನಲ್ಲಿ ತೆರಳುತ್ತಿದ್ದ ಅವರು ರಸ್ತೆ ಬದಿಯಲ್ಲಿ ವಿದ್ಯಾರ್ಥಿಗಳು ನಿಂತಿರುವುದನ್ನು ಗಮನಿಸಿ ವಾಹನದಿಂದ ಇಳಿದು ವಿದ್ಯಾರ್ಥಿಗಳ ಬಳಿ ತೆರಳಿ ಸಮಸ್ಯೆಗಳನ್ನು ಆಲಿಸಿದರು. ಬಸ್‌ಗಳು ಸಮಯಕ್ಕೆ ಸರಿಯಾಗಿ ಸಂಚರಿಸದ ಕಾರಣ ವಿದ್ಯಾರ್ಥಿಗಳು ದಿನನಿತ್ಯ ತೊಂದರೆ ಅನುಭವಿಸುತ್ತಿರುವುದನ್ನು ವಿದ್ಯಾರ್ಥಿಗಳು ಶಾಸಕರಿಗೆ ವಿವರಿಸಿದರು.

ವಿದ್ಯಾರ್ಥಿಗಳ ಅಹವಾಲು ಆಲಿಸಿದ ಶಾಸಕರು, ತಕ್ಷಣವೇ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ, ಸೋಮವಾರದಿಂದ ಶೆಟ್ಟಿಹಳ್ಳಿ ವೃತ್ತದಲ್ಲಿ ಒಬ್ಬ ಟಿಕೆಟ್ ಕಲೆಕ್ಟರ್ (ಟಿ.ಸಿ) ನಿಯೋಜಿಸಿ, ಬಸ್‌ಗಳು ನಿಗದಿತ ಸಮಯಕ್ಕೆ ಸಂಚರಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.



# 50 ಸಾವಿರ ರೂ. ಮೌಲ್ಯದ ವೈರ್ ಕಳವು

• ಪ್ರಜೋದಯ ವರದಿ

**ಹಾಸನ:** ನಿರ್ಮಾಣ ಹಂತದ ಮನೆಗೆ ಅಳವಡಿಸಿದ್ದ ವಿದ್ಯುತ್ ವೈರ್‌ಗಳನ್ನು ಕಳವು ಮಾಡಿರುವ ಘಟನೆ ನಗರದ ಸತ್ಯಮಂಗಲ ಬಡಾವಣೆಯಲ್ಲಿ ನಡೆದಿದೆ.

ನಿವೃತ್ತ ಸೈನಿಕ ಕುಶಾಲ್ ರಾಜು ಅವರ ಮನೆಯಲ್ಲಿ ಕಳುವಾಗಿದೆ. ಮಂಗಳವಾರ ಮಧ್ಯರಾತ್ರಿ ಮನೆಗೆ ಅಳವಡಿಸಿದ್ದ ಬಾಗಿಲಿನ ಸ್ಕ್ರೂ ಬಿಚ್ಚಿ ಒಳನುಗ್ಗಿರುವ ಕಳ್ಳ ವೈರ್ ಕಳವು ಮಾಡಿದ್ದಾನೆ. ಕ್ಯೂರಿಂಗ್‌ಗೆ ನೀರು ಹಾಕಲು ತುಂಬಿಸಿದ್ದ ಡ್ರಮ್ ಮೇಲೆ ಹತ್ತಿ ವೈರ್ ಕತ್ತರಿಸಿದ್ದಾನೆ. ಸುಮಾರು 50 ಸಾವಿರ ರೂ. ಮೌಲ್ಯದ ಸಾಮಾಗ್ರಿ ಕಳುವಾಗಿದ್ದು, ಕಳ್ಳನ ಚಲನವಲನ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.

# ಸವಲತ್ತು ಕಲ್ಪಿಸುವ ನೆಪದಲ್ಲಿ ವಂಚನೆ: ಪ್ರತಿಭಟನೆ




• ಪ್ರಜೋದಯ ವರದಿ

**ಹಾಸನ:** ಸಹಾಯಧನ ಯೋಜನೆಯಡಿ ಸರ್ಕಾರದ ವಿವಿಧ ಸವಲತ್ತು ಕಲ್ಪಿಸುತ್ತೇನೆಂದು ಸಾರ್ವಜನಿಕರಿಂದ ವ್ಯಕ್ತಿಯೊಬ್ಬ ಲಕ್ಷಾಂತರ ರೂಪಾಯಿ ಪೀಕಿದ್ದು ಆತನ ವಿರುದ್ಧ ಕ್ರಮ ಜರುಗಿಸಬೇಕೆಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗು ದಲಿತ ಹಕ್ಕುಗಳ ಸಮಿತಿಯಿಂದ ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಹೆಚ್.ಆರ್.ನವೀನ್‌ಕುಮಾರ್ ಅವರು ಮಾತನಾಡಿ, ಹಳೇಕೋಟೆ ಹೋಬಳಿ ಚಾಕೇನಹಳ್ಳಿಕಟ್ಟೆ ಗ್ರಾಮದ ಸಿ.ಎಸ್.ನಾಗರಾಜು ಎಂಬಾತ ಕೃಷಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆಂದು ಜನರನ್ನು ನಂಬಿಸಿ ಸಹಾಯಧನ ರೂಪದಲ್ಲಿ ಟ್ರ್ಯಾಕ್ಟರ್, ಮನೆ ಸಾಲ, ಕೊಡಿಸುತ್ತೇನೆ. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ಕೊಡಿಸುತ್ತೇನೆ. ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿ ಮತ್ತಿತರ ಸೌಲಭ್ಯ ಕಲ್ಪಿಸುತ್ತೇನೆಂದು ರೈತರಿಂದ ಫೋನ್ ಪೇ, ಗೂಗಲ್ ಪೇ ಹಾಗು ನೇರವಾಗಿ ಸುಮಾರು 60 ಲಕ್ಷ ರೂ.ಗಿಂತ ಹೆಚ್ಚು ಹಣ ಪಡೆದಿದ್ದು, ರೈತರು ಮೋಸಕ್ಕೆ ಬಲಿಯಾಗಿದ್ದಾರೆಂದರು.

ಈ ಸಂಬಂಧ ಹೊಳೆನರಸೀಪುರ ಪಟ್ಟಣ ಮತ್ತು ಗ್ರಾಮಾಂತರ ಠಾಣೆಗಳಲ್ಲಿ ನಾಲ್ಕು ಎಫ್‌ಐಆರ್ ದಾಖಲಾಗಿದೆ. ಆದರೆ, ಪೊಲೀಸರು ಈವರೆಗೆ ಬಂಧಿಸಿಲ್ಲ. ದಲಿತರ ಹೆಸರಿನಲ್ಲಿರುವ ಯೋಜನೆಗಳನ್ನು ಇತರರಿಗೆ ಕೊಡಿಸುವುದಾಗಿ ವಂಚನೆ ಮಾಡಿರುವ ನಾಗರಾಜು ವಿರುದ್ಧ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿ ನ್ಯಾಯ ದೊರಕಿಸಿ ಕೊಡಬೇಕೆಂದು ಆಗ್ರಹಿಸಿದರು.

## ವಿದ್ಯಾರ್ಥಿಗಳಿಗೆ ಫೋಕ್ಸೊ ಕಾಯ್ದೆ ಅರಿವು ಕಾರ್ಯಕ್ರಮದಲ್ಲಿ ಪಿಎಸ್‌ಐ ರೂಪಾದೇವಿ ಬಿರಾದಾರ್

# ಅಸಭ್ಯ ವರ್ತನೆ ಕಂಡು ಬಂದ ತಕ್ಷಣ ಮಾಹಿತಿ ನೀಡಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಶಾಲೆ ಸೇರಿ ಯಾವುದೇ ಸ್ಥಳಗಳಲ್ಲಿ ಪರಿಚಿತ ಅಥವಾ ಅಪರಿಚಿತ ವ್ಯಕ್ತಿಗಳಿಂದ ಅಸಭ್ಯ ವರ್ತನೆ ಕಂಡು ಬಂದರೆ ತಕ್ಷಣ ಪೋಷಕರು ಅಥವಾ ಶಿಕ್ಷಕರಿಗೆ ಮಾಹಿತಿ ನೀಡಬೇಕೆಂದು ಹಿರೀಸಾವೆ ಪಿಎಸ್‌ಐ ರೂಪಾದೇವಿ ಬಿರಾದಾರ್ ಅವರು ಸಲಹೆ ನೀಡಿದರು.

ತಾಲ್ಲೂಕಿನ ಹಿರೀಸಾವೆ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದ ಪಿಎಂಶ್ರೀ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಫೋಕ್ಸೊ ಕಾಯ್ದೆ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪುಂಡ ಪೋಕರಿಗಳ ಹಾವಳಿ ಹೆಚ್ಚಾಗುತ್ತಿದೆ. ಹೆಣ್ಣು ಮಕ್ಕಳು ಸಾಕಷ್ಟು ಜಾಗೃತಿ ವಹಿಸಬೇಕು. ಇಲ್ಲವಾದರೆ ಬದುಕು ದುರ್ಬಲವಾಗುತ್ತದೆಂದರು.

ರಸ್ತೆಯಲ್ಲಿ ಸಾಗುವ ವೇಳೆ ಅಪರಿಚಿತರಿಂದ ಅಥವಾ ಶಾಲೆಗಳಲ್ಲಿ ಸಹಪಾಠಿಗಳು ಇಲ್ಲವೇ ಇತರರಿಂದ



ಅಸಭ್ಯ ವರ್ತನೆ ಕಂಡು ಬಂದರೆ ಶಿಕ್ಷಕರಿಗೆ ತಿಳಿಸಬೇಕು. ಇಲ್ಲವೇ, 1098 ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಬಹುದು. ಮನೆಗೆ ತೆರಳಿದ ತಕ್ಷಣ ಪಾಲಕರ ಗಮನಕ್ಕೆ ತರಬೇಕು. ಇದರಿಂದ ಸಮಸ್ಯೆಗೆ ತಕ್ಷಣ ಪರಿಹಾರ ಕಂಡುಕೊಳ್ಳಬಹುದೆಂದರು.

ಶೈಕ್ಷಣಿಕ ಹಂತದಲ್ಲಿ ಓದು ಹಾಗು ಮುಂದಿನ ಸಾಧನೆಯ ಬಗ್ಗೆ ಗಮನ ಕೇಂದ್ರಿಕರಿಸಬೇಕು. ವ್ಯಾಮೋಹಕ್ಕೆ ಒಳಗಾಗಿ ದಾರಿ ತಪ್ಪಿದರೆ ಮತ್ತೊಮ್ಮೆ ಜೀವನವನ್ನು ಸರಿಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ನಮ್ಮ ಬದುಕು ರೂಪಿಸುವಲ್ಲಿ ಪರಿಶ್ರಮ ಪಡುತ್ತಿರುವ ಪಾಲಕರ ಬಗ್ಗೆ ಗೌರವ ಬೆಳೆಸಿಕೊಳ್ಳಬೇಕು. ನಮ್ಮಿಂದ ಅವರ ಆಸೆ ಹಾಗು ನಂಬಿಕೆಗೆ ದ್ರೋಹ ಬಗೆಯಬಾರದೆಂದರು.

**ಸಾಮಾಜಿಕ ಜಾಲತಾಣಗಳ ಬಗ್ಗೆ ಎಚ್ಚರವಿರಲಿ**

ಟಿವಿ ವೀಕ್ಷಣೆಯಿಂದ ಮನರಂಜನೆ ಸಿಗಬಹುದು. ಹಾಗೆಯೇ ಶೈಕ್ಷಣಿಕ ವ್ಯವಸ್ಥೆಗೆ ಮೊಬೈಲ್ ಬಳಕೆ ಅಗತ್ಯ. ಅತಿಯಾದರೆ ಅಮೃತವೂ ವಿಷ ಎಂಬಂತೆ ಮೊಬೈಲ್ ಹಾಗು ಟಿವಿ ಭವಿಷ್ಯದ ಮೇಲೆ ದುಷ್ಪರಿಣಾಮ ಬೀರುತ್ತವೆ. ಶಿಕ್ಷಣವನ್ನು ನಂಬಿ ಮುನ್ನಡೆದರೆ ಭವಿಷ್ಯ ಉಜ್ವಲವಾಗಿರುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ವೈಯಕ್ತಿಕ ಮಾಹಿತಿ ಹಾಗು ಫೋಟೊ ಹಂಚಿಕೊಳ್ಳುವುದು ಒಳ್ಳೆಯ ನಡೆಯಲ್ಲ. ಅಪರಿಚಿತರು ದುರ್ಬಳಕೆ ಮಾಡಿಕೊಂಡು ನಿಮ್ಮ ಮೇಲೆ ಆರೋಪಗಳು ಬರುವಂತೆ ಮಾಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಬ್ಲಾಕ್ ಮೇಲ್ ಮಾಡಿ ನಿಮ್ಮ ಕುಟುಂಬಕ್ಕೆ ಬೆದರಿಕೆ ಹಾಕಿ ಹಣ ವಸೂಲಿ ಮಾಡುವ ಸಾಧ್ಯತೆ ಇರಲಿದೆ. ಪೊಲೀಸ್ ಠಾಣೆ, ಅಧಿಕಾರಿಗಳನ್ನು ಕಂಡರೆ ಭಯಪಡುವ ಅಗತ್ಯವಿಲ್ಲ. ಜನಸ್ನೇಹಿ ಪೊಲೀಸ್ ವ್ಯವಸ್ಥೆ ಜಾರಿಯಲ್ಲಿದೆ. ಯಾವುದೇ ಅಪಾಯ ಎದುರಾದರೆ ನಮ್ಮ ಗಮನಕ್ಕೆ ತರಬೇಕೆಂದು ಕಿವಿಮಾತು ಹೇಳಿದರು.

ಮುಖ್ಯ ಶಿಕ್ಷಕಿ ಉಮಾ, ಸಹ ಶಿಕ್ಷಕ ಧರ್ಮೇಶ್, ಎಎಸ್‌ಐ ಶ್ರೀನಿವಾಸ್ ಮೂರ್ತಿ, ವಾಣಿ ಹಲವರಿದ್ದರು.

# ಅವೈಜ್ಞಾನಿಕ ರಸ್ತೆ ಕಾಮಗಾರಿ : ಆಕ್ರೋಶ



• ಪ್ರಜೋದಯ ವರದಿ

**ಅರೇಹಳ್ಳಿ :** ಬೇಲೂರು-ಅರೇಹಳ್ಳಿ-ಸಕಲೇಶಪುರ ಮಾರ್ಗದ ರಸ್ತೆ ದುರಸ್ತಿ ಕಾಮಗಾರಿ ನಡೆಸಿದ ಒಂದೇ ದಿನದಲ್ಲಿ ಡಾಂಬರ್ ಕಿತ್ತು ಬರುತ್ತಿದ್ದು, ಬೇಕಾಬಿಟ್ಟಿ ಕಾಮಗಾರಿ ನಡೆಸಲಾಗಿದೆ. ಅವೈಜ್ಞಾನಿಕ ಹಂಪ್ಸ್ ನಿರ್ಮಿಸಲಾಗಿದೆ ಎಂದು ಸ್ಥಳೀಯರು, ವಾಹನ ಸವಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೇಲೂರಿನಿಂದ ಅರೇಹಳ್ಳಿ ಮಾರ್ಗವಾಗಿ ಸಕಲೇಶಪುರಕ್ಕೆ ತೆರಳುವ ಮುಖ್ಯ ರಸ್ತೆ ಕಳೆದ ಒಂದು ವರ್ಷದಿಂದ ಹದಗೆಟ್ಟು ವಾಹನಗಳ ಸಂಚಾರವೇ ದುಸ್ತರವಾಗಿತ್ತು. ಪಟ್ಟಣದ ಹೊರವಲಯ ಲಿಂಗಾಪುರ ಗ್ರಾಮದ ಸ್ಮಶಾನದ ಮುಂಭಾಗದ ರಸ್ತೆ ಹಾಗು ಹಲವೆಡೆ ದೊಡ್ಡ ದೊಡ್ಡ ಗುಂಡಿಗಳು ಬಿದ್ದಿದ್ದರಿಂದ ಅಪಘಾತಗಳು ಸಂಭವಿಸಿದ್ದವು. ಈ ಹಿನ್ನಲೆ ಸ್ಥಳೀಯರು ಮತ್ತು ವಾಹನ ಸವಾರರು ಹಲವು ಬಾರಿ ಪ್ರತಿಭಟನೆ ನಡೆಸಿದ್ದರು.

ಶುಕ್ರವಾರದಿಂದ ರಸ್ತೆ ದುರಸ್ತಿ ಕಾಮಗಾರಿ ಕೈಗೊಂಡಿರುವುದು ಸ್ವಾಗತಾರ್ಹ. ಆದರೆ, ನಿರ್ದಿಷ್ಟ ಪ್ರಮಾಣದಲ್ಲಿ ಜಲ್ಲಿ, ಡಾಂಬರ್ ಉಪಯೋಗಿಸದೆ ಬೇಕಾಬಿಟ್ಟಿ ಕಾಮಗಾರಿ ನಡೆಸಲಾಗುತ್ತಿದೆ. ಹಾಕಿರುವ ಡಾಂಬರ್ ಕಿತ್ತು ಬರುತ್ತಿದೆ. ಈಗ ಮಾಡುತ್ತಿರುವ ಕಾಮಗಾರಿ ಕಳಪೆಯಾಗಿರುವುದರಿಂದ ಮುಂಬರುವ ಮಳೆಗಾಲಕ್ಕೆ ಉಳಿಯುವುದಿಲ್ಲವೆಂದು ಆರೋಪಿಸಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳ ಬೇಕೆಂದು ಒತ್ತಾಯಿಸಿದರು.

ಪಟ್ಟಣದ ಹೀರಾ ಸೆಂಟರ್ ಮುಂಭಾಗ ಹಾಕಿರುವ ಹಂಪ್ಸ್ ಎತ್ತರವಾಗಿರುವುದರಿಂದ ಕಾರು, ಬೈಕ್‌ಗಳ ತಳಭಾಗಕ್ಕೆ ತಾಗುತ್ತಿದ್ದು, ಸರಿಪಡಿಸಬೇಕೆಂದು ಆಗ್ರಹಿಸಿದ್ದಾರೆ.

C M Y K

# ಪರಿಸರ ಸಂರಕ್ಷಣೆ ಕುರಿತು ಅರಿವು ಅಗತ್ಯ

• ಪ್ರಜೋದಯ ವರದಿ

**ಸಕಲೇಶಪುರ:** ವಿದ್ಯಾರ್ಥಿಗಳಿಗೆ ಅರಣ್ಯ ಹಾಗೂ ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಅರಣ್ಯ ಮತ್ತು ಪರಿಸರ ವಿಷಯದ ಮೇಲೆ ಚಿತ್ರಕಲಾ ಸ್ಪರ್ಧೆ ಆಯೋಜಿಸಿರುವುದು ಶ್ಲಾಘನೀಯ ಕಾರ್ಯ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.



ಪಟ್ಟಣದ ಲಯನ್ಸ್ ಸಭಾಂಗಣದಲ್ಲಿ ಜನಮಿತ್ರ ಪತ್ರಿಕೆ, ಕನ್ನಡಪ್ರಭ ಹಾಗೂ ಸುವರ್ಣ ನ್ಯೂಸ್ ಚಾನಲ್‌ಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದ ತಾಲ್ಲೂಕು ಮಟ್ಟದ ಕಲಾಕುಂಚ ಚಿತ್ರಕಲಾ ಸ್ಪರ್ಧೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ವಿದ್ಯಾರ್ಥಿ ದಶೆಯಿಂದಲೇ ಪರಿಸರದ ಬಗ್ಗೆ ಕಾಳಜಿ ವಹಿಸುವುದು ಅತ್ಯಂತ ಅಗತ್ಯವಾಗಿದ್ದು, ಭಗವಂತ ನೀಡಿರುವ ಈ ಸುಂದರ ಪ್ರಕೃತಿಯನ್ನು ಸಂರಕ್ಷಿಸಿ ಉಳಿಸಿದರೆ ಅದು ನಮ್ಮನ್ನೇ ರಕ್ಷಿಸುತ್ತದೆ ಎಂದರು.

ಇತ್ತೀಚಿನ ದಿನಗಳಲ್ಲಿ ವಿಶ್ವದಾದ್ಯಂತ ಪ್ರಕೃತಿ ಅಸಮತೋಲನದಿಂದ ಸಂಭವಿಸುತ್ತಿರುವ ಅನಾಹುತಗಳನ್ನು ಗಮನಿಸಿದರೆ, ಮುಂದಿನ ಪೀಳಿಗೆಗಾಗಿ ಅರಣ್ಯ ಹಾಗೂ ಪ್ರಕೃತಿಯನ್ನು ಉಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರಲ್ಲದೆ, ಚಿತ್ರಕಲೆ ಮಕ್ಕಳ ಏಕಾಗ್ರತೆಯನ್ನು ಹೆಚ್ಚಿಸುವುದರ ಜೊತೆಗೆ ಅವರ ಕಲ್ಪನಾ ಶಕ್ತಿ, ಮಾನಸಿಕ ಆರೋಗ್ಯ ಹಾಗೂ ಸೃಜನಶೀಲ ಸಾಮರ್ಥ್ಯವನ್ನು ವೃದ್ಧಿಸುತ್ತದೆ. ಇಂತಹ ಉಪಯುಕ್ತ ಕಾರ್ಯಕ್ರಮವನ್ನು ಆಯೋಜಿಸಿರುವ ಪತ್ರಿಕಾ ಸಂಸ್ಥೆಗಳ ಕಾರ್ಯ ಶ್ಲಾಘನೀಯವಾಗಿದೆ ಎಂದು ಅವರು ಪ್ರಶಂಸಿಸಿದರು.

ಮುಖ್ಯ ಅತಿಥಿಯಾಗಿ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೈಭೀಮ್ ಮಂಜು ಅವರು ಮಾತನಾಡಿ, ಪರಿಸರ ಹಾಗೂ ಅರಣ್ಯ ಸಂರಕ್ಷಣೆಯ ಉದ್ದೇಶದಿಂದ ಆಯೋಜಿಸಿರುವ ಈ ಕಾರ್ಯಕ್ರಮವನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಅರಣ್ಯ ಇಲಾಖೆ ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್ ಸಹಯೋಗದಲ್ಲಿ ಈ ಸ್ಪರ್ಧೆ ರಾಜ್ಯಮಟ್ಟದಲ್ಲಿ ನಡೆಯುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಲಯನ್ಸ್ ಸಂಸ್ಥೆಯ ಅಧ್ಯಕ್ಷ ಮಂಜುನಾಥ್ ಗಿರೀಶ್ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಈ ಚಿತ್ರಕಲಾ ಸ್ಪರ್ಧೆಯಲ್ಲಿ ಒಟ್ಟು 94 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರಥಮ ಸ್ಥಾನವನ್ನು ಜೆಎಸ್ಎಸ್ ಶಾಲೆಯ ವಿದ್ಯಾರ್ಥಿ ಲಿಖಿತ್ ಎ.ಜೆ., ದ್ವಿತೀಯ ಸ್ಥಾನವನ್ನು ತೋಷಿತ್ ಹಾಗೂ ತೃತೀಯ ಸ್ಥಾನವನ್ನು ರೋಟರಿ ಆಂಗ್ಲ ಶಾಲೆಯ ಬೃಹತ್‌ಗೌಡ ಎಚ್. ಪಡೆದುಕೊಂಡರು. ತೀರ್ಪುಗಾರರಾಗಿ ಚಿತ್ರಕಲಾವಿದರಾದ ಕೃತಿ ಪ್ರಜ್ವಲ್, ಶ್ರೀಧರ್ ಎಂ. ಹಾಗೂ ಮೋಹನ್ ಕುಮಾರ್ ಕಾರ್ಯ ನಿರ್ವಹಿಸಿದರು.

ಜನಮಿತ್ರ ಪತ್ರಿಕೆ ವರದಿಗಾರ ಯೋಗೇಶ್, ಪತ್ರಕರ್ತ ಕಾಂತರಾಜ್ ಹೊನ್ನೇ ಕೊಡಿ, ಶಿಕ್ಷಕ ಮಂಜುನಾಥ್, ಮಾಜಿ ಪುರಸಭೆ ಸದಸ್ಯ ಪ್ರದೀಪ್, ಪರಮೇಶ್ ಇನ್ನಿತರರಿದ್ದರು.

## ಜ.2ರಂದು ಆಲೂಗಡ್ಡೆ ಬೀಜೋತ್ಪಾದನಾ ಕ್ರಮಗಳ ಕಾರ್ಯಾಗಾರ



**ಹಾಸನ:** ತೋಟಗಾರಿಕೆ ಇಲಾಖೆ ವತಿಯಿಂದ ಸುಸ್ಥಿರ ಹಾಗೂ ಗುಣಮಟ್ಟದ ಆಲೂಗಡ್ಡೆ ಬೀಜೋತ್ಪಾದನಾ ಕ್ರಮಗಳು ಎಂಬ ವಿಷಯದ ಕುರಿತು ಒಂದು ದಿನದ ಕಾರ್ಯಾಗಾರವನ್ನು ಜ.2 ರಂದು ಬೆಳಿಗ್ಗೆ 10 ಗಂಟೆಗೆ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಈ ಕಾರ್ಯಾಗಾರಕ್ಕೆ ಆಲೂಗಡ್ಡೆ ವರ್ತಕರು, ರೈತರು, ರೈತ ಉತ್ಪಾದಕರ ಸಂಸ್ಥೆಗಳ ಪ್ರತಿನಿಧಿಗಳು, ವಿಜ್ಞಾನಿಗಳು ಹಾಗೂ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪರಿಶ್ರಮದ ಮೂಲಕ ಯಶಸ್ಸು ಸಾಧ್ಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ವಿದ್ಯಾರ್ಥಿ ಜೀವನ ಅಮೂಲ್ಯವಾದದ್ದು.ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಅರುಣಕುಮಾರಿ ಹೇಳಿದ್ದಾರೆ.



ತಾಲೂಕಿನ ದಂಡಿಗನಹಳ್ಳಿ ಹೋಬಳಿ ದೂತನೂರು ಕಾವಲಿನ ಟ್ರಸ್ಟ್ ಪಿಯು ಕಾಲೇಜಿನಲ್ಲಿ, ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಪ್ರೆಸ್ಟೀಜ್ ಗ್ಲೋಬಲ್ ಅಕಾಡೆಮಿ ಆಯೋಜಿಸಿದ್ದ, ರಾಷ್ಟ್ರೀಯ ಗ್ರಾಹಕರ ದಿನ ಹಾಗೂ ಮಾದಕ ದ್ರವ್ಯಗಳ ಬಗ್ಗೆ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕಾನೂನು ಬಗ್ಗೆ ಜಾಗೃತಿ ಅರಿವು ಮೂಡಿಸುವ ಕಾರ್ಯವನ್ನು ಕಾನೂನು ಸೇವಾ ಸಮಿತಿ, ಮಾಡುತ್ತಿದೆ ಮಕ್ಕಳು ಉನ್ನತ ವ್ಯಾಸಂಗ ಮಾಡಿ, ಹಸಿರು ಇಂಕಿನಲ್ಲಿ ಸಹಿ ಮಾಡುವ ಹುದ್ದೆ ಅಲಂಕರಿಸಬೇಕು, ಪರಿಶ್ರಮದ ಮೂಲಕ ಯಶಸ್ವಿ ಮೆಟ್ಟಿಲುಗಳನ್ನು ಹತ್ತಬೇಕು, ನಿಷ್ಠೆ ಪ್ರಾಮಾಣಿಕತೆ ಶ್ರದ್ಧೆ ಭಕ್ತಿಯ ಮೂಲಕ ಯಶಸ್ವಿಗೊಳಿಸಬಹುದು ನಿಮ್ಮ ಜೀವನ ನಿಮ್ಮ ಕೈಯಲ್ಲಿಟ್ಟು ಸಮಾಜದ ಉತ್ತಮ ಪ್ರಜೆಗಳಾಗಿ, ಸಿಕ್ಕ ಅವಕಾಶಗಳನ್ನು ಕಳೆದುಕೊಳ್ಳಬೇಡಿ, ಗ್ರಾಹಕರ ಹಿತ ಕಾಯಲು ಗ್ರಾಹಕರ ವೇದಿಕೆ ಇದೆ ಎಂದರು.

ವಕೀಲ ದಿನೇಶ್ ಅವರು ಮಾತನಾಡಿ, ಗ್ರಾಹಕರ ಕಾಯ್ದೆ ಪರಿಹಾರದ ಬಗ್ಗೆ, ಉಪನ್ಯಾಸ ನೀಡಿ ಪದಾರ್ಥಗಳ ತಯಾರಾದ ಹಾಗೂ ಅವಧಿ ಮುಕ್ತಾಯದ ದಿನಾಂಕಗಳನ್ನು ನೋಡಿ ಖರೀದಿಸಬೇಕು. ನ್ಯೂನ್ಯತೆ ಇದ್ದಾಗ ಗ್ರಾಹಕನಿಗೆ ನ್ಯಾಯ ಒದಗಿಸಲು ಗ್ರಾಹಕರ ವೇದಿಕೆ ನಿಮ್ಮ ನೆರವಿಗೆ ಬರಲಿದೆ ಎಂದು ತಿಳಿಸಿದರು.

ವಕೀಲೆ ಸಿ.ಎಲ್. ಭಾಗ್ಯ ಅವರು ಮಾದಕ ವಸ್ತುಗಳ ಬಗ್ಗೆ ಮಾತನಾಡಿ, ಮಾದಕ ವಸ್ತುಗಳಿಗೆ ವಿದ್ಯಾರ್ಥಿಗಳು ಬಲಿಯಾಗುತ್ತಿದ್ದಾರೆ. ಇದರಿಂದ ಆರೋಗ್ಯ, ನೆಮ್ಮದಿ, ಹಣ, ಸಮಾಜದಲ್ಲಿನ ಗೌರವ ಹಾಳಾಗುತ್ತದೆ, ಜೀವನದಲ್ಲಿ ಎಚ್ಚರಿಕೆ ಅಗತ್ಯವಿದೆ. ಪುಸ್ತಕ ಪತ್ರಿಕೆಗಳನ್ನ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ದುಶ್ಚಟಗಳಿಗೆ ವಿದ್ಯಾರ್ಥಿಗಳು ಬಲಿಯಾಗಿ ಜೀವನ ಹಾಳು ಮಾಡಿಕೊಳ್ಳಬೇಡಿ ಎಂದು ಕಿವಿಮಾತು ಹೇಳಿದರು.

ಪ್ರಾಂಶುಪಾಲ ದಿಲೀಪ್ ಪಿ.ಸಿ., ಉಪನ್ಯಾಸಕ ಮಹೇಶ್, ಯೋಗೇಶ್, ನ್ಯಾಯಾಲಯದ ಸಿಬ್ಬಂದಿ ಭಗವಾನ್ ಇನ್ನಿತರರು ಹಾಜರಿದ್ದರು.

# ಭವಿಷ್ಯದಲ್ಲಿ ಎ.ಐ.ನ ಪಾತ್ರ ಮಹತ್ತರವಾದುದು

• ಪ್ರಜೋದಯ ವರದಿ

**ಹಾಸನ:** ಪ್ರಚಲಿತ ಹಾಗೂ ಭವಿಷ್ಯದಲ್ಲಿ ಎ.ಐ.ನ ಪಾತ್ರ ಬಹಳ ಮಹತ್ತರವಾಗಿರುತ್ತದೆ ಹಾಗೂ ಎ.ಐ. ಎಂಬುದು ಎಲ್ಲಾ ಕ್ಷೇತ್ರಗಳಲ್ಲಿಯೂ ತನ್ನದೇ ಆದ ಸ್ಥಾನ ಪಡೆಯಲಿದೆ. ಆದ ಕಾರಣ ಎಲ್ಲರೂ ಅಐ ವಿಷಯದ ಜ್ಞಾನ ಪಡೆಯಬೇಕೆಂದು ಜೆಕ್ ರಿಪಬ್ಲಿಕ್ ದೇಶದ ಜ್ಲಿನ್ ನಗರದ ಥಾಮಸ್ ಬಾಟ ವಿಶ್ವವಿದ್ಯಾಲಯದ ಅಐ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕ ಪ್ರೋ. ರೋಮನ್ ಸೆಂಕರಿಕ್ ತಿಳಿಸಿದರು.



ನಗರದ ರಾಜೀವ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಎರಡು ದಿನಗಳ ಕಾಲ ನಡೆಯುತ್ತಿರುವ AiC&2025 ಎಂಬ ಶೀರ್ಷಿಕೆಯಡಿ ಇಂಜಿನಿಯರಿಂಗ್ ವ್ಯವಸ್ಥೆಯಲ್ಲಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸನ ಪಾತ್ರ ಎಂಬ ವಿಷಯದ ಮೇಲೆ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

IEEE ಬೆಂಗಳೂರು ವಿಭಾಗದ ಮುಖ್ಯಸ್ಥ ಡಾ.ಚನ್ನಿಗಪ್ಪ ಮುಂಜಂದಿರ ಅವರು ಮಾತನಾಡಿ, ರಾಜೀವ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ IEEE ವಿದ್ಯಾರ್ಥಿ ಘಟಕವನ್ನು ಸ್ಥಾಪಿಸಿ ಆ ಮೂಲಕ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಪ್ರಬಂಧಗಳ ಮಂಡನೆಗೆ ಅವಕಾಶ ಕಲ್ಪಿಸಿಕೊಟ್ಟು ತಮ್ಮ ಜ್ಞಾನ ವೃದ್ಧಿಯ ಜೊತೆಗೆ ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಬೇಕೆಂದು ತಿಳಿಸಿದರು.

ಸಮ್ಮೇಳನಕ್ಕೆ ಒಟ್ಟು 1225 ಪ್ರಬಂಧಗಳು ಬಂದಿದ್ದು 505 ಪ್ರಬಂಧಗಳನ್ನು ಆಯ್ಕೆ ಮಾಡಲಾಗಿದೆ.

# ನಾಟಕ ಕಲೆ ಉಳಿಸಿ-ಬೆಳೆಸುವುದು ಎಲ್ಲರ ಕರ್ತವ್ಯ: ಸಿಮೆಂಟ್ ಮಂಜು

## ಪ್ರೇಕ್ಷಕರ ಮನಸೆಳೆದ ಎಲ್‌ಇಡಿ ಸೀನರಿ ದೃಶ್ಯವೈಭವದ ಕುರುಕ್ಷೇತ್ರ ನಾಟಕ

• ಪ್ರಜೋದಯ ವರದಿ

**ಹಾಸನ:** ನಾಟಕಗಳನ್ನು ಕಲಾವಿದರು ಹೆಚ್ಚು ಪ್ರೀತಿಯಿಂದ ಕಲಿಯಬೇಕು. ಹಾಗೆಯೇ ನಾಟಕಗಳನ್ನು ಉಳಿಸಿ-ಬೆಳೆಸುವುದು ಎಲ್ಲರ ಕರ್ತವ್ಯವಾಗಿದ್ದು, ಮೊಬೈಲ್‌ನಲ್ಲಿ ಮುಳುಗಿರುವ ಮಕ್ಕಳನ್ನು ಪೌರಾಣಿಕ ನಾಟಕ ನೋಡಲು ಪೋಷಕರು ಕರೆತರಬೇಕು ಎಂದು ಸಕಲೇಶಪುರ- ಆಲೂರು-ಕಟ್ಟಾಯ ಕ್ಷೇತ್ರದ ಶಾಸಕ ಸಿಮೆಂಟ್ ಮಂಜು ಸಲಹೆ ನೀಡಿದರು.



ನಗರದ ಶ್ರೀ ಅನ್ನಪೂರ್ಣೇಶ್ವರಿ ಕಲಾಸಂಘದ ವತಿಯಿಂದ ಹಾಸನಾಂಬ ಕಲಾಕ್ಷೇತ್ರದಲ್ಲಿ ನಾಲ್ಕು ದಿನ ಪೌರಾಣಿಕ ನಾಟಕೋತ್ಸವ ಏರ್ಪಡಿಸಲಾಗಿತ್ತು. ಮೊದಲ ದಿನ ಹಿರಿಯ ರಂಗಭೂಮಿ ಕಲಾವಿದರು ದಿ. ಬಿ.ಆರ್.ಕೃಷ್ಣೇಗೌಡ ಬಳ್ಳೇಕೆರೆ ಇವರ ಸ್ಮರಣಾರ್ಥ ಬೆಳ್ಳೂರು ಕ್ರಾಸ್ ಡಿ.ಸಿ. ಪುಟ್ಟರಾಜು ನಿರ್ದೇಶನದಲ್ಲಿ ನಡೆದ ಕುರುಕ್ಷೇತ್ರ ನಾಟಕ ಪ್ರದರ್ಶನದಲ್ಲಿ ಅವರು ಮಾತನಾಡಿದರು.

ಸಾಹಿತಿ ಗೊರೂರು ಅನಂತರಾಜು ಮಾತನಾಡಿ, ಬಿ.ಪುಟ್ಟಸ್ವಾಮಯ್ಯ ವಿರಚಿತ ಕುರುಕ್ಷೇತ್ರ ನಾಟಕ ನಮ್ಮ ಹಾಸನ ಮೈಸೂರು ಭಾಗದಲ್ಲಿ ಬಹು ಜನಪ್ರಿಯತೆ ಪಡೆದಿದೆ. ಪ್ರೇಕ್ಷಕರು ಎಷ್ಟು ಬಾರಿಯಾದರೂ ಇಷ್ಟ ಪಟ್ಟು ನೋಡುತ್ತಾರೆ. ಈ ನಾಟಕದ ಹಾಡು ದೃಶ್ಯ, ಸಂಭಾಷಣೆ ಎಲ್ಲವೂ ನವರಸಗಳ ಸಮ್ಮಿಳಿತವಾಗಿಪ್ರೇಕ್ಷಕರ ಮನಸ್ಸಿಗೆ ಮುದ ನೀಡುತ್ತದೆ. ಹಳ್ಳಿಯ ಕಲಾವಿದರು ಕಲಾಭವನದಲ್ಲಿ ತಮ್ಮ ಕಲಾಪ್ರತಿಭೆ ತೋರುತ್ತಿರುವುದು, ಡಿ.ವಿ.ನಾಗಮೋಹನ್‌ರಂತಹ ರಂಗ ಸಂಘಟಕರು ನಾಟಕೋತ್ಸವ ನಡೆಸಿ ಪ್ರೇಕ್ಷಕರಿಗೆ ರಂಜನೆ ನೀಡುತ್ತಿರುವುದು ಶ್ಲಾಘನೀಯ ಎಂದರು.

ಬಿ.ಆರ್.ಕೃಷ್ಣೇಗೌಡರ ಧರ್ಮಪತ್ನಿ ನಾಗರತ್ನಮ್ಮ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಕವಿ ಎನ್.ಎಲ್. ಚನ್ನೇಗೌಡ ಹಾಗೂ ವಕೀಲರ ಸಂಘದ ಮಾಜಿ ಅಧ್ಯಕ್ಷ ಜೆ.ಪಿ.ಶೇಖರ್ ಮಾತನಾಡಿ, ನಾಟಕಕ್ಕೆ ಶುಭ ಹಾರೈಸಿದರು. ನಿ. ಪ್ರಾಧ್ಯಾಪಕ ಎ.ಹೆಚ್.ಗಣೇಶ್ ಅಂಕಪುರ, ವಕೀಲರು ವಿಜಯಕುಮಾರ್, ಹರೀಶ್, ಕಲಾವಿದರು ರಾಮಲಿಂಗೇಗೌಡ, ಗುಂಡುರಾಜ್, ರಮೇಶ್ ಗೌಡಪ್ಪ, ಹೆಚ್.ಎಂ.ಪ್ರಭಾಕರ್, ಕಲ್ಲಯ್ಯ (ಕುಶಾಲ್), ಯರೇಹಳ್ಳಿ ಮಂಜೇಗೌಡ, ಗೋವಿಂದೇಗೌಡ, ಪೊಲೀಸ್ ರಂಗಸ್ವಾಮಿ, ಕಲಾವಿದೆ ಸಾವಿತ್ರಿ, ಅಶೋಕ್, ಸಬ್ ರಿಜಿಸ್ಟರ್ ಸೋಮಶೇಖರ್, ಹೇಮರಾಜ್, ಡಿ.ಬಿ. ನಾಗಮೋಹನ್, ಗಾಯಕ ಶೇಖರಪ್ಪ ಹಾಜರಿದ್ದರು.

ನಾಟಕದ ಮುಖ್ಯ ಪಾತ್ರಗಳಲ್ಲಿ ಎಂ.ಟಿ.ತಿಮ್ಮೇಗೌಡ (ಕೃಷ್ಣ) ಐ.ಎ. ಮಹೇಂದ್ರ (ದುರ್ಯೋಧನ), ಪ್ರಸನ್ನ (ಅರ್ಜುನ), ವಿಶ್ವನಾಥಗೌಡ ಬಿ.ಕೆ. (ಶಕುನಿ), ಕೆ.ಎಸ್.ರವಿ (ಕರ್ಣ) ಭೀಮ (ಎಂ.ಬಿ.ಶಂಕರ್) ಧರ್ಮರಾಯ (ಬಿ.ಟಿ.ಸುಂದರ್), ದುಶ್ಯಾಸನ (ದರ್ಶನ್) ವಿಧುರ (ಗಣೇಶ್) ಧೃತರಾಷ್ಟ್ರ (ರವಿ ಹೆಚ್.ಡಿ) ಭೀಷ್ಮ (ಸೋಮಶೇಖರ್) ದ್ರೋಣ (ಅಣ್ಣೇಗೌಡ) ತಮ್ಮ ಪಾತ್ರಗಳನ್ನು ಯಶಸ್ವಿಯಾಗಿ ನಿಭಾಯಿಸಿದರು.

# ಸರ್ಕಾರದ ಸೌಲಭ್ಯಗಳನ್ನು ಅಧಿಕಾರಿಗಳು ಪ್ರಾಮಾಣಿಕವಾಗಿ ರೈತರಿಗೆ ತಲುಪಿಸಲಿ

• ಪ್ರಜೋದಯ ವರದಿ

**ಸಕಲೇಶಪುರ:** ಮಲೆನಾಡು ಭಾಗದ ರೈತರ ಜೀವನ ಸಂಕಷ್ಟದಲ್ಲಿದೆ. ಸತತವಾಗಿ ಕಾಡುಪ್ರಾಣಿಗಳ ಹಾವಳಿ, ಅತಿವೃಷ್ಟಿಅನಾವೃಷ್ಟಿಯಿಂದ ರೈತರು ಕಂಗಾಲಾಗಿದ್ದಾರೆ. ಯಾವ ಕಾಲಕ್ಕೆ ಯಾವ ಬೆಳೆಗಳನ್ನು ಬೆಳೆಯಬೇಕು, ಬೆಳೆದ ಬೆಳೆಗಳಿಗೆ ಯಾವ ರೀತಿಯ ಉತ್ತಮ ದರವನ್ನು ಪಡೆದುಕೊಳ್ಳಬೇಕು ಎಂಬ ಮಾಹಿತಿಯನ್ನು ಕೃಷಿ ಅಧಿಕಾರಿಗಳು ರೈತರಿಗೆ ನೇರವಾಗಿ ತಿಳಿಸಬೇಕು. ಜೊತೆಗೆ ಸರ್ಕಾರದಿಂದ ರೈತರಿಗೆ ಸಿಗುವ ಸೌಲಭ್ಯಗಳನ್ನು ಅಧಿಕಾರಿಗಳು ಪ್ರಾಮಾಣಿಕವಾಗಿ ತಲುಪಿಸುವ ಕೆಲಸ ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.



ಕೃಷಿಕ ಸಮಾಜ, ಕೃಷಿ ಮತ್ತು ಕೃಷಿಗೆ ಸಂಬಂಧಿತ ಇಲಾಖೆಗಳು, ಸಂಸ್ಥೆಗಳು ಹಾಗೂ ಸಂಘಸಂಸ್ಥೆಗಳ ಸಹಯೋಗದಲ್ಲಿ ಸಕಲೇಶಪುರ ತಾಲ್ಲೂಕಿನಲ್ಲಿ ರೈತರ ದಿನಾಚರಣೆಯನ್ನು ನಗರದ ಬಿಎಂ ರಸ್ತೆಯ ಎಪಿಎಂಸಿಗೆ ಹೊಂದಿಕೊಂಡಿರುವ ಟಿಎಪಿಸಿಎಂಎಸ್ ರೈತ ಭವನದಲ್ಲಿ ಏರ್ಪಡಿಸಲಾಗಿತ್ತು. ಶಾಸಕ ಸಿಮೆಂಟ್ ಮಂಜುನಾಥ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರೈತ ದೇಶದ ಬೆನ್ನೆಲುಬು. ಒಂದು ದೇಶ ಸಮೃದ್ಧಿಯಾಗಿ ಮುಂದುವರೆಯಬೇಕಾದರೆ ಅಲ್ಲಿ ರೈತರ ಜೀವನ ನೆಮ್ಮದಿಯಿಂದ ಕೂಡಿರಬೇಕು. ದೇಶದ ರಾಷ್ಟ್ರಪತಿ, ಪ್ರಧಾನಮಂತ್ರಿ ಸೇರಿದಂತೆ ಉನ್ನತ ಹುದ್ದೆಯಲ್ಲಿರುವ ಅನೇಕ ವ್ಯಕ್ತಿಗಳ ಹಿಂದಿನ ತಲೆಮಾರಿನವರು ರೈತರಾಗಿದ್ದಾರೆ. ಮೋಸ ವಂಚನೆ ಮಾಡದ ಉದ್ಯಮ ಎಂದರೆ ಅದು ಕೃಷಿ ಉದ್ಯಮ. ಇಂತಹ ಉದ್ಯಮ ಇತ್ತೀಚಿನ ದಿನಗಳಲ್ಲಿ ಸಂಕಷ್ಟದಲ್ಲಿದ್ದರೂ, ಮುಂದಿನ ದಿನಗಳಲ್ಲಿ ರೈತರ ಮಕ್ಕಳಿಗೆ ಹೆಣ್ಣು ಕೊಡಲು ಜನರು ಹುಡುಕಿಕೊಂಡು ಬರುವಂತಹ ಸನ್ನಿವೇಶ ಎದುರಾಗಲಿದೆ ಎಂದರು.

ಸಕಲೇಶಪುರ ತಾಲ್ಲೂಕಿನಲ್ಲಿ ಕಾಫಿ ಕುಯ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹೊರ ರಾಜ್ಯಗಳ ಕಾರ್ಮಿಕರು ಹಾಗೂ ಬಾಂಗ್ಲಾದೇಶದವರು ಆಗಮಿಸುತ್ತಿದ್ದಾರೆ. ಈ ಕುರಿತು ಕಾಫಿ ಬೆಳೆಗಾರರು ಎಚ್ಚರಿಕೆ ವಹಿಸಬೇಕು. ಕಾರ್ಮಿಕರ ಗುರುತಿನ ಚೀಟಿಯನ್ನು ಪಡೆದುಕೊಳ್ಳಬೇಕು. ಅನುಮಾನಾಸ್ಪದ ವ್ಯಕ್ತಿಗಳಾಗಿದ್ದರೆ ಅಥವಾ ಗುರುತಿನ ಚೀಟಿ ಹೊಂದಿಲ್ಲದವರ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಕರೆ ನೀಡಿದರು.

ತಾಲ್ಲೂಕು ಕೃಷಿ ಸಹಾಯಕ ಅಧಿಕಾರಿ ಯು.ಎಂ.ಪ್ರಕಾಶ್ ಮಾತನಾಡಿ, ಭಾರತದ 5ನೇ ಪ್ರಧಾನಮಂತ್ರಿ ಚೌಧರಿ ಚರಣ್ ಸಿಂಗ್ ಅವರ ಸ್ಮರಣಾರ್ಥವಾಗಿ ಅವರ ಜನ್ಮದಿನವಾದ ಡಿ. 23ನ್ನು ಪ್ರತಿ ವರ್ಷ ರಾಷ್ಟ್ರೀಯ ರೈತರ ದಿನ ಅಥವಾ ಕಿಸಾನ್ ದಿವಸ್ ಎಂದು ಆಚರಿಸಲಾಗುತ್ತದೆ. ಅವರು ಜುಲೈ 1979ರಿಂದ ಜನವರಿ 1980ರವರೆಗೆ ಪ್ರಧಾನಮಂತ್ರಿಯಾಗಿದ್ದರು. ಈ ಅವಧಿಯಲ್ಲಿ ರೈತರ ಕಲ್ಯಾಣಕ್ಕಾಗಿ ತಂದ ಯೋಜನೆಗಳು ಇಂದಿಗೂ ಜನಪ್ರಿಯವಾಗಿವೆ. ರೈತಪರ ಯೋಜನೆಗಳನ್ನು ಜಾರಿಗೆ ತಂದಿದ್ದಕ್ಕಾಗಿ ಅವರ ನೆನಪಿನಲ್ಲಿ ಈ ದಿನವನ್ನು ಆಚರಿಸಲಾಗುತ್ತದೆ ಎಂದರು.

ರೈತರ ದಿನಾಚರಣೆಯನ್ನು ಆಚರಿಸುವ ಮೂಲಕ ರೈತರೆಲ್ಲ ಒಂದೇ ವೇದಿಕೆಯಲ್ಲಿ ಸೇರಿ ಸರ್ಕಾರದ ಸೌಲಭ್ಯಗಳ ಬಗ್ಗೆ ತಿಳಿದುಕೊಳ್ಳಬಹುದು. ಕೃಷಿಕ ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು, ತಾಲ್ಲೂಕಿನ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು ಹಾಗೂ ತಾಲ್ಲೂಕು ಕೃಷಿ ಅಧಿಕಾರಿಗಳು ಉಪಸ್ಥಿತರಿದ್ದರು

# ಜ.6,7 ಕ್ಕೆ ದಿಗಂಬರ ಜೈನ ಅರ್ಚಕರ ಸಮ್ಮೇಳನ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಶ್ರೀ ದಿಗಂಬರ ಜೈನ ಮಹಾಸಂಸ್ಥಾನ ಮಠ ಶ್ರೀ ಕ್ಷೇತ್ರ ಶ್ರವಣಬೆಳಗೊಳ ದಕ್ಷಿಣ ಭಾರತ ದಿಗಂಬರ ಜೈನ ಅರ್ಚಕರ ಸಂಘ ಮೈಸೂರು ಇವರ ಸಮಿತ ಆಶ್ರಯದಲ್ಲಿ 5ನೇ ದಕ್ಷಿಣ ಭಾರತ ದಿಗಂಬರ ಜೈನ ಅರ್ಚಕರ ಸಮ್ಮೇಳನವನ್ನು ಜನವರಿ 6 ಮತ್ತು 7ನೇ ತಾರೀಖಿನಂದು ಶ್ರೀಕ್ಷೇತ್ರ ಶ್ರವಣಬೆಳಗೊಳದಲ್ಲಿ ನಡೆಯಲಿದೆ ಎಂದು ದಕ್ಷಿಣ ಭಾರತ ದಿಗಂಬರ ಜೈನ ಅರ್ಚಕರ ಸಂಘದ ಕಾರ್ಯದರ್ಶಿ ವಿದ್ಯಾವಾಚಸ್ಪತಿ ಡಾ.ಎಚ್.ಪಿ. ಮೋಹನ್ ಕುಮಾರ್ ಶಾಸ್ತ್ರಿ ತಿಳಿಸಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದರ ಪಾವನ ಸಾನ್ನಿಧ್ಯ ಪರಮಪೂಜ್ಯ ಸುತ್ತಿ ಶ್ರೀ ಭುವನಕಿತ್ತಿ ಭಟ್ಟಾರಕ ಮಹಾಸ್ವಾಮಿಜಿ ಶ್ರೀ ಕ್ಷೇತ್ರ ಕನಕನ ಗಿರಿ ದಿಗಂಬರ ಜೈನ ಮಠ ಚಾಮರಾಜನಗರ ಹಾಗೂ ಪರಮ ಪೂಜ್ಯ ಜಗದ್ಗುರು ಸ್ವಸ್ತಿ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಯವರು ಶ್ರೀ ಕ್ಷೇತ್ರ ಶ್ರವಣಬೆಳಗೊಳ ದಿಗಂಬರ ಜೈನ ಮಹಾಸಂಸ್ಥಾನ ಮಠ ದಿವ್ಯ ಸನ್ನಿಧಾನದಲ್ಲಿ ಹಾಗೂ ವಾಸ್ತು ಹಾಗೂ ಜ್ಯೋತಿಷ್ಯ ಸಲಹೆಗಾರರು ವಿಶ್ರಾಂತ ಪ್ರಾಂಶುಪಾಲರು ಮೂಡಬಿದ್ರೆ ಡಾ. ಪದೂರ ಸುದರ್ಶನ ಕುಮಾರ ಇಂದ್ರ, ಇವರು ಸಮ್ಮೇಳನದ ಅಧ್ಯಕ್ಷರಾಗಿ ಐದನೇ ದಕ್ಷಿಣ ಭಾರತ ದಿಗಂಬರ ಜೈನ ಅರ್ಚಕರ ಸಮ್ಮೇಳನವನ್ನು ಕೈಗೊಳ್ಳಲಾಗಿದೆ ಈ ಕಾರ್ಯಕ್ರಮಕ್ಕೆ ಎಲ್ಲಾ ಜೈನ ಸಮಾಜದವರು ಬಂಧುಗಳು ಈ ಸಮ್ಮೇಳನಕ್ಕೆ ಆಗಮಿಸಿ ಈ ಸಮ್ಮೇಳನವನ್ನು ಯಶಸ್ವಗೊಳಿಸಬೇಕಾಗಿ ಕೋರುತ್ತಿದ್ದೇವೆ ಎಂದರು.

ದಕ್ಷಿಣ ಭಾರತ ದಿಗಂಬರ ಜೈನ ಅರ್ಚಕರ ಸಂಘದ ಅಧ್ಯಕ್ಷರಾದ ಪ್ರತಿಷ್ಠಾ ಚಾರ್ಯ ಡಾಕ್ಟರ್ ಎಸ್ ಎಂ ಸನ್ಮತಿ ಕುಮಾರ್ ಶಾಸ್ತ್ರಿ, ನಿರ್ದೇಶಕ ಪ್ರಶಾಂತ್ ಕುಮಾರ್ ಹಾಜರಿದ್ದರು.

# ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತ ಪ್ರಗತಿಯತ್ತ

## ಕಾಂಗ್ರೆಸ್‌ನಿಂದಾಗಿ ಕರ್ನಾಟಕ ಅವನತಿಯತ್ತ: ಎಚ್.ಡಿ. ಕುಮಾರಸ್ವಾಮಿ

• ಪ್ರಜೋದಯ ವರದಿ

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗುವತ್ತ ಸ್ಥಿರವಾಗಿ ಸಾಗುತ್ತಿದ್ದರೆ, ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಕರ್ನಾಟಕ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಹೇಳಿದ್ದಾರೆ.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ಜನ್ಮ ದಿನಾಚರಣೆಯ ಕಾರ್ಯಕ್ರಮ, ಅಟಲ್ ಪ್ರಶಸ್ತಿ ಪ್ರದಾನ ಮತ್ತು ಉತ್ತಮ ಆಡಳಿತ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡಿದ ಅವರು, ಕರ್ನಾಟಕವು ಒಂದು ಕಾಲದಲ್ಲಿ ಆಡಳಿತ ಮತ್ತು ಅಭಿವೃದ್ಧಿಗೆ ಮಾದರಿ ರಾಜ್ಯವಾಗಿತ್ತು ಎಂದು ಹೇಳಿದರು.

ಕರ್ನಾಟಕವು ಒಂದು ಕಾಲದಲ್ಲಿ ಅನುಕರಣೀಯ ಆಡಳಿತಕ್ಕೆ ಸಮಾನಾರ್ಥಕವಾಗಿತ್ತು. ಅದು ಅತ್ಯುತ್ತಮ ಅಭಿವೃದ್ಧಿ ಮಾದರಿಯನ್ನು ಅಳವಡಿಸಿಕೊಂಡಿತ್ತು ಮತ್ತು ಇಡೀ ರಾಷ್ಟ್ರಕ್ಕೆ ನಾಯಕನಾಗಿ ಹೊರಹೊಮ್ಮಿತ್ತು. ಆದರೆ, ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ, ಈ ಎಲ್ಲ ಕಳೆದು ಹೋಗಿವೆ ಮತ್ತು ರಾಜ್ಯವು ಈಗ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ ಎಂದರು.

ಸದ್ಯದ ಆಡಳಿತವು ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ಹಾನಿಗೊಳಿಸಿದೆ. ಕರ್ನಾಟಕವು ಒಂದು ಕಾಲದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿತ್ತು. ಉತ್ತಮ ರಾಜ್ಯದಲ್ಲಿ ಕ್ಷುಲ್ಲಕ ರಾಜಕೀಯ ನಡೆಯುತ್ತಿದೆ. ಆರೋಗ್ಯ,



ಶಿಕ್ಷಣ, ಕೃಷಿ ಮತ್ತು ಕಂದಾಯ ಸೇರಿದಂತೆ ಎಲ್ಲ ಇಲಾಖೆಗಳಲ್ಲಿ ಆಡಳಿತ ಹದಗೆಟ್ಟಿದೆ. ಜನರು ಈಗ ಗಂಭೀರವಾಗಿ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಹೇಳಿದರು.

ಉತ್ತಮ ಆಡಳಿತದ ಯುಗ ಮತ್ತೆ ಬರಬೇಕು ಎಂದು ಪ್ರತಿಪಾದಿಸಿದ ಕುಮಾರಸ್ವಾಮಿ, ಈ ಸರ್ಕಾರದ ದುರಾಡಳಿತದಿಂದ ಜನರು ಬೇಸತ್ತಿದ್ದಾರೆ. ಒಂದು ಕಾಲದಲ್ಲಿ ಐಟಿ-ಬಿಟಿ ರಾಜಧಾನಿ ಮತ್ತು ಶಿಕ್ಷಣ ಮತ್ತು ತಂತ್ರಜ್ಞಾನದ ಕೇಂದ್ರವಾಗಿದ್ದ ಬೆಂಗಳೂರು, ಮೂಲಸೌಕರ್ಯ ವಿಚಾರದಲ್ಲಿ ಸಂಪೂರ್ಣವಾಗಿ ಹದಗೆಟ್ಟಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರವು ಸದುದ್ದೇಶ ಮತ್ತು ತಜ್ಞರ ಸಲಹೆಯನ್ನು ಸ್ವೀಕರಿಸುವ ಮನಸ್ಥಿತಿಯನ್ನು ಹೊಂದಿಲ್ಲ. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಬಗ್ಗೆಯೂ ಬೇಜವಾಬ್ದಾರಿಯಿಂದ ಮಾತನಾಡುವ ಸಂಸ್ಕೃತಿಯನ್ನು ಬೆಳೆಸಿಕೊಂಡಿದೆ. ರಾಜ್ಯವು ಅಭಿವೃದ್ಧಿ ಹೊಂದಲು ಅಗತ್ಯವಿರುವ ಎಲ್ಲ ಸಾಮರ್ಥ್ಯ ಹೊಂದಿದೆ ಎಂದರು.

ಮೋದಿ ಸರ್ಕಾರದ ಆಡಿಯಲ್ಲಿ ಭಾರತ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಲು ಹೆಜ್ಜೆ ಹಾಕುತ್ತಿರುವ ಸಮಯದಲ್ಲಿ, ಕರ್ನಾಟಕ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಎಲ್ಲರೂ ಆಶ್ಚರ್ಯ ಪಡುತ್ತಾರೆ. ಅದು ಹಿಂದಕ್ಕೆ ಚಲಿಸುತ್ತಿದೆ ಮತ್ತು ಅವನತಿಯತ್ತ ಜಾರುತ್ತಿದೆ' ಎಂದು ಅವರು ತಿಳಿಸಿದರು.

ಶತ್ರುಗಳಿಲ್ಲದ ನಾಯಕ, ರಾಷ್ಟ್ರಕ್ಕೆ ದೀರ್ಘಕಾಲ ಮತ್ತು ವಿಶಿಷ್ಟ ಸೇವೆ ಸಲ್ಲಿಸಿದ ವಾಜಪೇಯಿ ಅವರು ಅಜಾತಶತ್ರು ಆಗಿದ್ದಾರೆ. ವಾಜಪೇಯಿ ಅವರಂತಹ ನಾಯಕರು ಇಂದು ಅಪರೂಪ. ವಿದೇಶಾಂಗ ಸಚಿವರಾಗಿ, ವಿರೋಧ ಪಕ್ಷದ ನಾಯಕರಾಗಿ ಮತ್ತು ಪ್ರಧಾನಿಯಾಗಿ ಅವರ ಕೊಡುಗೆಗಳು ಅಪಾರ. ಹೆಚ್ಚುತ್ತಿರುವ ಅಶಾಂತಿಯ ಬಗ್ಗೆ ಕಳವಳ ವ್ಯಕ್ತಪಡಿಸಿದ ಅವರು, ಕರ್ನಾಟಕ ಮತ್ತೊಮ್ಮೆ ಎಲ್ಲ ಸಮುದಾಯಗಳಿಗೆ ಶಾಂತಿಯ ತೋಟವಾಗಬೇಕು. ಕುಟುಂಬಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡಿದಾಗ, ಅದು ಆತಂಕವನ್ನು ಉಂಟುಮಾಡುತ್ತದೆ. ತಂತ್ರಜ್ಞಾನ ಮುಂದುವರೆದು ಆರ್ಥಿಕ ಶಕ್ತಿ ಹೆಚ್ಚುತ್ತಿರುವಾಗ, ಬೆಳಿಗ್ಗೆ ದೂರದರ್ಶನ ಆನ್ ಮಾಡುವುದಕ್ಕೂ ಭಯವಾಗುತ್ತದೆ. ಯಾರಿಗೂ ನೆಮ್ಮದಿ ಇಲ್ಲ. ಈ ಕಾರಣಕ್ಕಾಗಿಯೇ ನಾನು ಶಾಲಾ ಮಟ್ಟದಲ್ಲಿ ಭಗವದ್ಗೀತೆಯನ್ನು ಕಲಿಸಬೇಕೆಂದು ಪ್ರತಿಪಾದಿಸಿದ್ದೇನೆ. ದುರದೃಷ್ಟವಶಾತ್, ಈ ವಿಷಯದಲ್ಲಿ ರಾಜಕೀಯವನ್ನು ಅನಗತ್ಯವಾಗಿ ಬೆರೆಸಲಾಗುತ್ತಿದೆ ಎಂದರು.

# ಡಿ.29, 30 ರಂದು ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ಕವಿಪ್ರನಿನಿಯಿಂದ 66/11 ಕೆ.ವಿ ಬಸವಾಪಟ್ಟ, ವಿ.ವಿ ಕೇಂದ್ರದಲ್ಲಿ ಪಿ.ಎಂ. ಕುಸುಮ್ ಸೋಲಾರ್ ಪವರ್ ಪ್ಲಾಂಟ್ ಬ್ರೇಕರ್ ಅಳವಡಿಸುವ ಕಾಮಗಾರಿಯ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಡಿ. 29 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಬಸವಾಪಟ್ಟ ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಜಾಡಘಟ್ಟ, ಆದಿಹಳ್ಳಿ, ರಂಗಾಪುರ, ಬೆಲವತ್ತಳ್ಳಿ, ಬೈರಾಪುರ, ವೇದಾವತಿ, ಹೊನ್ನಾವರ, ಸಿದ್ದಾಪುರ, ಪೂಮಗಾಮೆ, ಬಸವಾಪಟ್ಟ, ಬಾಗೇಶಪುರ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಾಗುವ ಪ್ರದೇಶಗಳ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.



66/11 ಕೆ.ವಿ. ಸಕಲೇಶಪುರ, ಬಾಳ್ಳುಪೇಟೆ, ಹಾನುಬಾಳು, ಕಂದಲಿ, ಅರೇಹಳ್ಳಿ ಮತ್ತು ಮಗ್ಗೆ ವಿ.ವಿ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಡಿ.30 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ 66/11ಕೆ.ವಿ ಸಕಲೇಶಪುರ, ಬಾಳ್ಳುಪೇಟೆ, ಹಾನುಬಾಳು, ಕಂದಲಿ, ಅರೇಹಳ್ಳಿ ಮತ್ತು ಮಗ್ಗೆ ವಿ.ವಿ ಕೇಂದ್ರಗಳಿಂದ ವಿದ್ಯುತ್ ಸರಬರಾಜಾಗುವ ಪ್ರದೇಶಗಳ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಕಾರ್ಯಾಚರಣೆಗಳ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ಅವು ತಿಳಿಸಿದ್ದಾರೆ.

# ಭತ್ತ ಖರೀದಿ ನೋಂದಣಿಗೆ ಅವಧಿ ವಿಸ್ತರಣೆ

**ಹಾಸನ:** ರೈತರಿಂದ ಭತ್ತ ಖರೀದಿ ಮಾಡಲು ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತವು ಪ್ರತಿ ಜಿಲ್ಲೆಗಳ ಅಗತ್ಯಕ್ಕೆ ತಕ್ಕಂತೆ ಖರೀದಿ ಕೇಂದ್ರಗಳನ್ನು ತೆರೆದು ದಿನಾಂಕ:15.09.2025 ರಿಂದ 31.10.2025 ರವರೆಗೆ ರಾಜ್ಯದ ರೈತರ ನೋಂದಣಿಯನ್ನು ಕೈಗೊಳ್ಳ ತಕ್ಕದ್ದು ಎಂದು ಆದೇಶಿಸಲಾಗಿತ್ತು.

ಆದರೆ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತವು ಜಿಲ್ಲೆಯ ಅಗತ್ಯಕ್ಕೆ ತಕ್ಕಂತೆ ಖರೀದಿ ಕೇಂದ್ರಗಳನ್ನು ತೆರೆದು 31.12.2025 ರವರೆಗೆ ಭತ್ತ ಖರೀದಿಗೆ ಜಿಲ್ಲೆಯ ರೈತರ ನೋಂದಣಿ ಅವಧಿಯನ್ನು ವಿಸ್ತರಿಸಲಾಗಿದೆ. ರೈತರು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

# ಏಕಬಳಕೆಯ ಪ್ಲಾಸ್ಟಿಕ್ ಸಾಮಾಗ್ರಿ ನಿಷೇಧ

• ಪ್ರಜೋದಯ ವರದಿ

**ಹಾಸನ:** ಮಹಾನಗರ ವ್ಯಾಪ್ತಿಯ ವರ್ತಕರಿಗೆ ಹಾಗೂ ಬಳಕೆದಾರರು ಪ್ಲಾಸ್ಟಿಕ್ ತ್ಯಾಜ್ಯವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮ-2016 ರನ್ವಯ ಘನತ್ಯಾಜ್ಯ ನಿರ್ವಹಣಾ ಉಪನಿಯಮಗಳು-2019ನ್ನು ಹಾಸನ ಮಹಾನಗರ ಪಾಲಿಕೆಯಲ್ಲಿ ಹಾಗೂ ಅಳವಡಿಸಿಕೊಳ್ಳಲಾಗಿದ್ದು, ಇದರ ಅನ್ವಯ ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಏಕಬಳಕೆಯ ಪ್ಲಾಸ್ಟಿಕ್ ಸಾಮಗ್ರಿಗಳನ್ನು ನಿಷೇಧಿಸಲಾಗಿದ್ದು ಸಾರ್ವಜನಿಕರು ಪ್ಲಾಸ್ಟಿಕ್ ವಸ್ತುಗಳ ಸಂಗ್ರಹಣೆ, ಬಳಕೆ ಸಾಗಾಣಿಕೆ ಮಾಡುವುದು ಕಂಡು ಬಂದಲ್ಲಿ ನಿಯಮಗಳ ಅನ್ವಯ ದಂಡ ವಿಧಿಸಲಾಗುವುದು.

ಮಹಾನಗರ ಪಾಲಿಕೆಯಿಂದ ಪ್ಲಾಸ್ಟಿಕ್ ಬಳಕೆ, ಸಂಗ್ರಹಣೆ ಮತ್ತು ಸಾಗಾಣಿಕೆ ಕಂಡುಬಂದಲ್ಲಿ ರೂ. 1000 ದಿಂದ 10,000 ವರಗೂ ದಂಡ ವಿಧಿಸಲಾಗುವುದಲ್ಲದೇ ಕಾನೂನು ಕ್ರಮ ಜರುಗಿಸಲು ಅವಕಾಶವಿರುತ್ತದೆ. ಆದ್ದರಿಂದ ಸಾರ್ವಜನಿಕರು ಪ್ಲಾಸ್ಟಿಕ್ ಬಳಕೆ ತ್ಯಜಿಸಿ ನಗರವನ್ನು ಪ್ಲಾಸ್ಟಿಕ್ ಮುಕ್ತ ನಗರವನ್ನಾಗಿಸಲು ಸಹಕರಿಸುವಂತೆ ಎಂದು ಮಹಾನಗರ ಪಾಲಿಕೆಯ ಆಯುಕ್ತರು ತಿಳಿಸಿದ್ದಾರೆ.

## ಸಂಘದ 12 ಸದಸ್ಯರ ಬಲದ ಚುನಾವಣೆಯಲ್ಲಿ 9 ಸ್ಥಾನಗಳಲ್ಲಿ ಎನ್‌ಡಿಎ ಬೆಂಬಲಿತ ಅಭ್ಯರ್ಥಿಗಳಿಗೆ ಜಯ

# ಅರೇಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಾಗೇಶ್‌ಶೆಟ್ಟಿ ಅಧ್ಯಕ್ಷ

• ಪ್ರಜೋದಯ ವರದಿ

**ಬೇಲೂರು:** ಅರೇಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 12 ಸದಸ್ಯರ ಬಲದ ಚುನಾವಣೆಯಲ್ಲಿ 9 ಸ್ಥಾನವನ್ನು ಎನ್‌ಡಿಎ ಬೆಂಬಲಿತ ಅಭ್ಯರ್ಥಿಗಳು ಜಯಗಳಿಸಿದ್ದು ಅಧ್ಯಕ್ಷ - ಉಪಾಧ್ಯಕ್ಷರ ಆಯ್ಕೆಯಲ್ಲಿ ಜೆಡಿಎಸ್- ಬಿಜೆಪಿ ಬೆಂಬಲಿತ ಅಧ್ಯಕ್ಷ ನಾಗೇಶ್ ಶೆಟ್ಟಿ ಹಾಗೂ ಉಪಾಧ್ಯಕ್ಷರಾಗಿ ಗಾಯಿತ್ರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಎಚ್‌ಡಿಸಿಸಿ ಬ್ಯಾಂಕಿನ ನಿರ್ದೇಶಕ ಎಂ.ಎ. ನಾಗರಾಜ್ ಅವರು ಮಾತನಾಡಿ, ಸಹಕಾರ ಕ್ಷೇತ್ರವು ರೈತರ ಪರವಾದ ಕ್ಷೇತ್ರವಾಗಿದೆ. ಇಲ್ಲಿಯವರೆಗೂ ಸಾಕಷ್ಟು ಸಾಲಸೌಲಭ್ಯಗಳನ್ನು ಎಲ್ಲಾ ಸಹಕಾರ ಕ್ಷೇತ್ರಗಳಿಗೆ ನೀಡಿದ್ದು ಇತ್ತಿಚಿಗೆ 10 ವರ್ಷಗಳ ಅವಧಿಯಲ್ಲಿ ತಾಲೂಕಿನ ಕಟ್ಟ ಕಡೆಯ ರೈತರಿಗೆ ಸಾಲದ ರೂಪದಲ್ಲಿ ಅವರನ್ನು ಆರ್ಥಿಕವಾಗಿ ಎಲ್ಲಾ ರೀತಿಯ ಅನುಕೂಲ ಮಾಡಿಕೊಡುವ ಮೂಲಕ ಹೈನುಗಾರಿಕೆ ಸೇರಿದಂತೆ ಇನ್ನಿತರ ಅನುಕೂಲ ಮಾಡಿಕೊಡುವ ಮೂಲಕ ತಾಲೂಕಿನ ಕಟ್ಟಕಡೆಯ ರೈತರಿಗೆ ಅನುಕೂಲ ಮಾಡಿಕೊಡುವುದು ಈ ಸಹಕಾರ ಕ್ಷೇತ್ರವಾಗಿದ್ದು ಸಾಲಸೌಲಭ್ಯ ನೀಡುವ ಮೂಲಕ ಅವರನ್ನು ಆರ್ಥಿಕವಾಗಿ ಮುಖ್ಯವಾಹಿನಿಗೆ ತರುವ ಕೆಲಸ ಮಾಡುತ್ತಿದೆ. ಅಲ್ಲದೆ ಯಾವುದೇ ರೈತಾಪಿ ವರ್ಗದವರು ಸಾಲ ಸೌಲಭ್ಯ ಪಡೆದು ಅದನ್ನು ಸರಿಯಾದ ರೀತಿಯಲ್ಲಿ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.



ತಾಲ್ಲೂಕಿನಲ್ಲಿ ಎರಡನೇ ಸ್ಥಾನದಲ್ಲಿ ಈ ಸಹಕಾರ ಕ್ಷೇತ್ರ ಮುನ್ನಡೆಯುತ್ತಿದ್ದು ಇನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಪಡಿಸಲು ಎಲ್ಲಾ ರೀತಿಯ ಸಹಕಾರವನ್ನು ನೀಡಲು ನಮ್ಮ ಹಾಸನ ಬ್ಯಾಂಕ್ ನಿಮ್ಮ ಜೊತೆಯಲ್ಲಿ ಇರುತ್ತದೆ. ಇದರ ಜೊತೆಯಲ್ಲಿ ಮೇಲ್ಭಾಗದ ಸಭಾಂಗಣ ನಿರ್ಮಾಣ ಮಾಡಲು ಹೆಚ್ಚಿನ ರೀತಿಯಲ್ಲಿ ಸಹಕಾರ ನೀಡಲು ಭರವಸೆ ನೀಡಿದ ಅವರು, ಯಾವುದೇ ರೀತಿಯ ಗೊಂದಲವಾಗದಂತೆ ಎಲ್ಲಾ ಸಹಕಾರ ಬಂಧುಗಳು ಒಗ್ಗಟ್ಟಾಗಿ ಈ ಸಹಕಾರ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಮನವಿ ಮಾಡಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ ಅವರು ಮಾತನಾಡಿ, ಸಹಕಾರ ಸಂಘದಲ್ಲಿ ಸೇವೆ ಸಲ್ಲಿಸುವಂತಹ ನಿರ್ದೇಶಕರನ್ನು ಆಯ್ಕೆ ಮಾಡಿರುವ ಈ ಭಾಗದ ಎಲ್ಲಾ ಮತದಾರ ಬಂಧುಗಳನ್ನು ಅಭಿನಂಧಿಸುವುದರ ಜೊತೆಗೆ ಮೈತ್ರಿ ಬೆಂಬಲಿತ ಅಭ್ಯರ್ಥಿಗಳನ್ನು ಈ ಬಾರಿ ಆಯ್ಕೆ ಮಾಡುವ ಮೂಲಕ ಈ ಸಹಕಾರ ಸಂಘವು ತಾಲೂಕಿನಲ್ಲಿ ಎರಡನೆ ಸ್ಥಾನದಲ್ಲಿದ್ದು ಮುಂದೆ ಇದು ಅಭಿವೃದ್ಧಿ ಪಥದಲ್ಲಿ ಸಾಗಲು ನಿಮ್ಮೆಲ್ಲರ ಸಹಕಾರ ಅತಿ ಮುಖ್ಯ. ಗ್ಯಾರಂಟಿ ಯೋಜನೆ ಮೂಲಕ ಈ ಸಹಕಾರ ಸಂಘದಲ್ಲೂ ಸಹ ಕಾಂಗ್ರೆಸ್ ಪಕ್ಷ ಅಸ್ತಿತ್ವ ಉಳಿಸಿಕೊಳ್ಳಲಾಗದೆ ಧೂಳೀಪಟವಾಗಿದ್ದು ಗ್ರಾಮೀಣ ಭಾಗದ ರೈತರು ಹೆಚ್ಚಾಗಿದ್ದು ಇಲ್ಲಿ 2 ಸಾವಿರಕ್ಕೂ ಹೆಚ್ಚು ಪಡಿತರ ಕಾರ್ಡ್‌ದಾರರಿದ್ದು ಸಹಕಾರ ಸಂಘದಿಂದ ಇಲ್ಲಿ ನ್ಯಾಯ ಬೆಲೆ ಅಂಗಡಿ ತೆರೆಯುವಂತೆ ಮನವಿ ಮಾಡಿದರು.

ನೂತನ ಅಧ್ಯಕ್ಷ ನಾಗೇಶ್ ಶೆಟ್ಟಿ ಮಾತನಾಡಿ, ನನ್ನ ಗೆಲುವಿಗೆ ಸಹಕರಿಸಿದ ಎಲ್ಲಾ ಶೇರುದಾರರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಅಲ್ಲದೆ ನಮ್ಮ ಸಹಕಾರ ಕ್ಷೇತ್ರದ ಸೋಲಿಲ್ಲದ ಸರದಾರ ನಾಗಣ್ಣನವರ ಸಹಕಾರದಿಂದ ಅವರ ಸಂಪೂರ್ಣ ಬೆಂಬಲದೊಂದಿಗೆ ಈ ಬಾರಿ ಮತ್ತೆ ಇಲ್ಲಿ ಮೈತ್ರಿ ಪಕ್ಷವು ಅಧಿಕಾರ ಹಿಡಿದಿದೆ. ಪಕ್ಷ ಭೇದ ಮರೆತು ಒಗ್ಗೂಡಿಸಿ ಕೆಲಸ ಮಾಡುತ್ತೇವೆ. ಈ ಹಿಂದೆ ಈ ಸಹಕಾರ ಕ್ಷೇತ್ರ ಸೂಪರ್ ಸೀಡ್ ಆಗುವ ಹಂತದಲ್ಲಿತ್ತು. ಹಿಂದಿನ ಅಧ್ಯಕ್ಷರ ಸಂಪೂರ್ಣ ಸಹಕಾರದಿಂದ ಈಗ ಅಭಿವೃದ್ಧಿ ಪಥದಲ್ಲಿದೆ.ಮಾಜಿ ಅಧ್ಯಕ್ಷರ ಸಹಕಾರ ಪಡೆದು ಸಂಘವನ್ನು ಅಭಿವೃದ್ಧಿ ಪಡಿಸುತ್ತೇವೆ ಎಂದು ಹೇಳಿದರು.

ನೂತನ ನಿರ್ದೇಶಕರಾದ ಹೆಚ್.ಡಿ. ತುಳಸೀದಾಸ್, ಚಂದ್ರಶೇಖರ್, ನಿಂಗರಾಜು, ಅನಂತರಾಜು, ಅಣ್ಣಪ್ಪ, ಸುಹಿಲ್‌ಪುರ್ ರೆಹಮಾನ್, ಪುಟ್ಟರಾಜು, ಹೇಮರಾಜು, ಪದ್ಮ ಇತರರಿದ್ದರು.

# ದೇಶದ 20 ಮಕ್ಕಳಿಗೆ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ

## ಮಕ್ಕಳ ಶೌರ್ಯ ಗುಣಗಾನ ಮಾಡಿದ ರಾಷ್ಟ್ರಪತಿ | ಕ್ರಿಕೆಟಿಗ ವೈಭವ್ ಭಾಜನ

• ಪ್ರಜೋದಯ ವರದಿ

**ನವದೆಹಲಿ:** ಶೌರ್ಯ, ಸಾಮಾಜಿಕ ಸೇವೆ, ಪರಿಸರ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ 20 ಮಕ್ಕಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಶುಕ್ರವಾರ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ಪ್ರದಾನ ಮಾಡಿದರು. ದ್ರೌಪದಿ ಮುರ್ಮು ಅವರು ಮಾತನಾಡಿ, ಈ ಪ್ರಶಸ್ತಿಗಳು ದೇಶಾದ್ಯಂತ ಎಲ್ಲಾ ಮಕ್ಕಳಿಗೆ ಸ್ಫೂರ್ತಿ ನೀಡುತ್ತವೆ. ಅವರ ಪ್ರೋತ್ಸಾಹಕ್ಕಾಗಿ ಈ ಪ್ರಶಸ್ತಿ ನೀಡಲಾಗಿದೆ ಎಂದರು.

ಸುಮಾರು 320 ವರ್ಷಗಳ ಹಿಂದೆ ಎಲ್ಲಾ ಭಾರತೀಯರಿಂದ ಪೂಜಿಸಲ್ಪಡುವ ಹತ್ತನೇ ಸಿಖ್ ಗುರು ಗೋವಿಂದ್ ಸಿಂಗ್ ಮತ್ತು ಅವರ ನಾಲ್ವರು ಪುತ್ರರು ಸತ್ಯ ಮತ್ತು ನ್ಯಾಯಕ್ಕಾಗಿ ಹೋರಾಡುತ್ತಾ ಸರ್ವೋಚ್ಚ ತ್ಯಾಗ ಮಾಡಿದರು. ಬಾಬಾ ಜೋರಾವರ್ ಸಿಂಗ್ ಮತ್ತು ಬಾಬಾ ಫತೇ ಸಿಂಗ್ ಎಂಬ ಇಬ್ಬರು ಕಿರಿಯ ಸಾಹಿಬ್‌ಜಾದಾಸ್ ಅವರ ಧೈರ್ಯವನ್ನು ಭಾರತ ಮತ್ತು ವಿದೇಶಗಳಲ್ಲಿ ಗೌರವಿಸಲಾಗುತ್ತದೆ. ಸತ್ಯ ಮತ್ತು ನ್ಯಾಯಕ್ಕಾಗಿ ಹೆಮ್ಮೆಯಿಂದ ಪ್ರಾಣ ಅರ್ಪಿಸಿದ ಮಹಾನ್ ಬಾಲ ವೀರರನ್ನು ಸ್ಮರಿಸಲಾಗುತ್ತದೆಂದರು.

ಮಕ್ಕಳು ದೇಶಭಕ್ತಿ ಮತ್ತು ಉನ್ನತ ಆದರ್ಶಗಳಿಂದ ತುಂಬಿದಾಗ ಆ ದೇಶದ ಶ್ರೇಷ್ಠತೆ ಹೆಚ್ಚುತ್ತದೆ. ಮಕ್ಕಳು ಶೌರ್ಯ, ಕಲೆ ಮತ್ತು ಸಂಸ್ಕೃತಿ, ಪರಿಸರ, ನಾವೀನ್ಯತೆ, ವಿಜ್ಞಾನ ಮತ್ತು ತಂತ್ರ ಜ್ಞಾನ, ಸಾಮಾಜಿಕ ಸೇವೆ ಮತ್ತು ಕ್ರೀಡೆಗಳಂತಹ ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆಂದರು.

ಏಳು ವರ್ಷದ ವಾಕಾ ಲಕ್ಷ್ಮಿ ಪ್ರಾಗ್ನಿಕಾ ಅವರಂತಹ ಪ್ರತಿಭಾನ್ವಿತ ಮಕ್ಕಳ ಕಾರಣದಿಂದಾಗಿ ಭಾರತವನ್ನು ವಿಶ್ವ ವೇದಿಕೆಯಲ್ಲಿ ಚೆಸ್ ಶಕ್ತಿ ಕೇಂದ್ರವೆಂದು ಪರಿಗಣಿಸಲಾಗಿದೆ. ತಮ್ಮ ಧೈರ್ಯ ಮತ್ತು ಬುದ್ಧಿವಂತಿಕೆಯಿಂದ ಇತರರ ಜೀವಗಳನ್ನು ಉಳಿಸಿದ ಅಜಯ್ ರಾಜ್ ಮತ್ತು ಪಿ. ಮೊಹಮ್ಮದ್ ಸಿದಾನ್ ಅವರು ಪ್ರಶಂಸೆಗೆ ಅರ್ಹರೆಂದರು.

ಒಂಬತ್ತು ವರ್ಷದ ವ್ಯೋಮ ಪ್ರಿಯಾ ಮತ್ತು 11 ವರ್ಷದ ಧೈರ್ಯಶಾಲಿ ಕಮಲೇಶ್ ಕುಮಾರ್ ಧೈರ್ಯದಿಂದ ಇತರರ ಜೀವಗಳನ್ನು ಉಳಿಸುವಾಗ ಪ್ರಾಣ ಕಳೆದುಕೊಂಡರು. ಆಪರೇಷನ್ ಸಿಂಧೂರ ಸಮಯದಲ್ಲಿ ಯುದ್ಧಕ್ಕೆ ಸಂಬಂಧಿಸಿದ ಅಪಾಯಗಳ ನಡುವೆಯೂ ಹತ್ತು ವರ್ಷದ ಶ್ರವಣ್ ಸಿಂಗ್ ತನ್ನ ಮನೆಯ ಸಮೀಪ ಗಡಿಯಲ್ಲಿ ಬೀಡು ಬಿಟ್ಟಿದ್ದ ಭಾರತೀಯ ಸೈನಿಕರಿಗೆ ನಿಯಮಿತವಾಗಿ ನೀರು, ಹಾಲು ಮತ್ತು ಲಸ್ಸಿ ತಲುಪಿಸುತ್ತಿದ್ದರು. ಅಂತೆಯೇ ಅಂಗವಿಕಲ ಮಗಳು ಶಿವಾನಿ ಹೊಸೂರು ಉಪ್ಪಾರ ಆರ್ಥಿಕ ಮತ್ತು ದೈಹಿಕ ಮಿತಿ ಗಳನ್ನು ಮೀರಿ ಕ್ರೀಡಾ ಜಗತ್ತಿನಲ್ಲಿ ಅಸಾ ಧಾರಣ ಸಾಧನೆ ಮಾಡಿದ್ದಾರೆಂದು ರಾಷ್ಟ್ರ ಪತಿ ಹೇಳಿದರು.




ವೈಭವ್ ಸೂರ್ಯವಂಶಿ ಅತ್ಯಂತ ಸ್ಪರ್ಧಾತ್ಮಕ ಮತ್ತು ಪ್ರತಿಭೆಯಿಂದ ತುಂಬಿದ ಕ್ರಿಕೆಟ್ ಜಗತ್ತಿನಲ್ಲಿ ಹೆಸರು ಮಾಡಿದ್ದಾರೆ. ಅವರಂತಹ ಧೈರ್ಯಶಾಲಿ ಮತ್ತು ಪ್ರತಿಭಾನ್ವಿತ ಮಕ್ಕಳು ಉತ್ತಮ ಕೆಲಸ ಮಾಡುವುದನ್ನು ಮುಂದುವರಿಸುತ್ತಾರೆ. ಭಾರತದ ಭವಿಷ್ಯವನ್ನು ಉಜ್ವಲಗೊಳಿ ಸುತ್ತಾರೆಂದು ವಿಶ್ವಾಸ ವ್ಯಕ್ತಪಡಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣ ದೇವಿ ಅವರು ತಮ್ಮ ಭಾಷಣದಲ್ಲಿ ಪ್ರಶಸ್ತಿ ಪಡೆದ ಮಕ್ಕಳು ಆತ್ಮವಿಶ್ವಾಸ ಮತ್ತು ಸಮರ್ಪಣೆಯಿಂದ ಸಂಪನ್ಮೂಲಗಳ ಕೊರತೆಯನ್ನು ನೀಗಿಸಬಹುದೆಂದು ಸಾಬೀತುಪಡಿಸಿದ್ದಾರೆಂದರು.

ಈ ವರ್ಷ 18 ರಾಜ್ಯ ಮತ್ತು ಕೇಂದ್ರ ರಾಜ್ಯಗಳಿಂದ 20 ಪ್ರತಿಭಾನ್ವಿತ ಮಕ್ಕಳನ್ನು ಸನ್ಮಾನಿಸ ಲಾಗುತ್ತಿದೆ. ಈ ಯುವ ವೀರರು ದೇಶದ ವಿವಿಧ ಭಾಗಗಳಿಂದ ಬಂದಿದ್ದಾರೆ. ನಮ್ಮ ಪ್ರಯತ್ನವು ಅಸಂಖ್ಯಾತ ಮಕ್ಕಳನ್ನು ಕನಸು ಕಾಣಲು, ಹೋರಾಡಲು ಮತ್ತು ಅರ್ಥಪೂರ್ಣ ಬದಲಾವಣೆ ಯನ್ನು ತರಲು ಪ್ರೋತ್ಸಾಹಿಸುತ್ತದೆ. ಈ ಬಲವಾದ ಅಡಿಪಾಯದ ಮೇಲೆ ಮಾತ್ರ ಭಾರತವು ತನ್ನ ವೈಭವ ಮತ್ತು ರಾಷ್ಟ್ರೀಯ ಹೆಮ್ಮೆಯನ್ನು ಮರಳಿ ಪಡೆಯುತ್ತದೆಂದು ನಾವು ದೃಢವಾಗಿ ನಂಬುತ್ತೇವೆಂದು ಹೇಳಿದರು.

**ಪುರಸ್ಕೃತ ಬಾಲಕರ ವಿವರ**

**ಶೌರ್ಯ :** ವ್ಯೋಮಪ್ರಿಯ(ಮರಣೋತ್ತರ)–ತಮಿಳುನಾಡು, ಕಮಲೇಶ್‌ಕುಮಾರ್ (ಮರಣೋತ್ತರ) –ಬಿಹಾರ, ಮೊಹಮ್ಮದ್ ಸಿದಾನ್ (11 ವರ್ಷ)–ಕೇರಳ, ಅಜಯ್ ರಾಯ್ (9 ವರ್ಷ) –ಉತ್ತರ ಪ್ರದೇಶ

**ಕಲೆ ಮತ್ತು ಸಂಸ್ಕೃತಿ**

ಎಸ್ಥರ್ ಲಾಲ್ದುಹವ್ಮಿ ನಮ್ಟೆ (9 ವರ್ಷ)–ಮಿಜೋರಾಂ, ಸುಮನ್ ಸರ್ಕಾರ್ (16 ವರ್ಷ) –ಪಶ್ಚಿಮ ಬಂಗಾಳ

**ಪರಿಸರ :** ಪೂಜಾ(17 ವರ್ಷ) –ಉತ್ತರ ಪ್ರದೇಶ

**ಸಮಾಜ ಸೇವೆ**

ಶ್ರವಣ್ ಸಿಂಗ್ (10ವರ್ಷ)–ಪಂಜಾಬ್, ವನ್ಶ್ ತಯಾಲ್ (17 ವರ್ಷ)–ಚಂಡೀಗಢ

**ವಿಜ್ಞಾನ ಮತ್ತು ತಂತ್ರಜ್ಞಾನ**

ಆಯಿಷಿ ಪ್ರಿಶಾ ಬೋರಾ (14 ವರ್ಷ)–ಅಸ್ಸಾಂ, ಆರ್ನವ್ ಅನುಪ್ರಿಯ ಮಹರ್ಷಿ (17 ವರ್ಷ)–ಮಹಾರಾಷ್ಟ್ರ

**ಕ್ರೀಡಾ ವಿಭಾಗ**

ಜ್ಯೋತಿ, ಪ್ಯಾರಾ ಅಥ್ಲೀಟ್ (17 ವರ್ಷ)–ಹರಿಯಾಣ, ಶಿವಾನಿ ಉಪ್ಪಾರ, ಪ್ಯಾರಾ ಅಥ್ಲೀಟ್ (17 ವರ್ಷ)–ಆಂಧ್ರ ಪ್ರದೇಶ, ಧಿನಿಧಿ ದೇಶಿಂಘು, ಈಜು (15 ವರ್ಷ) ಕರ್ನಾಟಕ, ಅನುಷ್ಕಾ ಕುಮಾರಿ, ಫುಟ್‌ಬಾಲ್ (14ವರ್ಷ)–ಜಾರ್ಖಂಡ್, ಯೋಗಿತಾ ಮಾಂಡವಿ, ಜೂಡೋ (14 ವರ್ಷ)–ಚತ್ತೀಸಗಢ, ಜೋಶ್ನಾ ಸಾಬರ್, ವೇಯ್ಟ್‌ಲಿಫ್ಟರ್ (16 ವರ್ಷ)–ಒಡಿಶಾ, ವಿ. ಎಲ್.ಪ್ರಗ್ನಿಕಾ, ಚೆಸ್(7 ವರ್ಷ)–ಗುಜರಾತ್, ವಿಶ್ವನಾಥ್ ಪದಕಂತಿ, ಪರ್ವತಾರೋಹಿ (16 ವರ್ಷ)–ತೆಲಂಗಾಣ ಹಾಗು ವೈಭವ್ ಸೂರ್ಯವಂಶ, ಕ್ರಿಕೆಟ್ (14 ವರ್ಷ)–ಬಿಹಾರ.

## ಶುಕ್ರವಾರದ ಕಾಫಿ ಧಾರಣೆ: 50 ಕೆ.ಜಿ.ಗೆ

| ಟ್ರೇಡರ್ಸ್ | ಎಪಿ | ಎಸಿ | ಆರ್‌ಪಿ | ಆರ್‌ಸಿ |
|---|---|---|---|---|
| ಹಾದಿ ಕಾಫಿ | 26,500 | 14,500 | 16,500 | 9,200 |
| ವೆಸ್ಟರ್ನ್ ಕಾಫಿ | 26,500 | 14,200 | 17,000 | 9,20 |
| ಗ್ರೈನ್‌ಕಾಫಿ ಸಕಲೇಶಪುರ | 26,500 | 13,600 | 16,000 | 9,200 |
| ಲಿಖಿತ್‌ಕಾಫಿ ಸಕಲೇಶಪುರ | 26,300 | 14,100 | 16,200 | 9,200 |
| ಬಾಳ್ಳುಪೇಟೆ | 26,500 | 13,800 | 16,500 | 8,600 |
| ಕೊಡ್ಲಿಪೇಟೆ | 26,350 | 13,500 | 16,000 | 9,500 |
| ಚಿಕ್ಕಮಗಳೂರು | 26,500 | 13,500 | 16,500 | 9,200 |
| ಮೂಡಿಗೆರೆ | 26,500 | 14,300 | 16,000 | 9,300 |
| ಸೋಮವಾರಪೇಟೆ | 26,400 | 14,000 | 00 | 00 |
| ಹಾಸನ | 26,200 | 13,000 | 00 | 00 |

ರೋಬಸ್ಟಾ ಚೆರಿ – 350 : ಅರೇಬಿಕ ಚೆರಿ ಒಟಿ– 525

## ಶವ ಗುರುತಿಸಲು ಡಿಎನ್‌ಎ ಪರೀಕ್ಷೆ

» ಮೊದಲನೇ ಪುಟದಿಂದ

ಒಟ್ಟಿಗೆ ಕಲಿತು, ಬದುಕು ಕಟ್ಟು ಕೊಂಡಿದ್ದ ಆತ್ಮೀಯ ಗೆಳತಿಯರು ಸಾವಿನಲ್ಲೂ ಒಂದಾಗಿದ್ದಾರೆ.

**ಹೆತ್ತವರ ದುಃಖ ಹೇಳತೀರದು**

ಬಸ್ ದುರಂತದಲ್ಲಿ ಮಕ್ಕಳನ್ನು ಕಳೆದುಕೊಂಡ ಹೆತ್ತವರ ದುಃಖ ಹೇಳತೀರದಾಗಿದೆ. ಬಸ್‌ನಲ್ಲಿ ಸಜೀವ ದಹನವಾದ ಯುವತಿ ನವ್ಯಾ ಮನೆಯಲ್ಲಿ ಶೋಕ ಮಡುಗಟ್ಟಿದ್ದು, ಮಗಳ ನೆನೆದು ತಂದೆ ಮಂಜಪ್ಪ ಕಣ್ಣೀರಿಡುತ್ತಿದ್ದಾರೆ.

ನವ್ಯ ತಂದೆ ಮಂಜಪ್ಪ ಮಾತನಾಡಿ, ದುರಂತದಲ್ಲಿ ಮಿಲನ ಬದುಕಿದ್ದರಿಂದ ಘಟನೆ ಬಗ್ಗೆ ನಮಗೆ ಕರೆ ಮಾಡಿ ಹೇಳಿದರು. ಹೋಗಿ ನೋಡಿದಾಗ ನಮ್ಮ ಮಗಳು ಹಾಗು ಮಾನಸ ಸಂಪೂರ್ಣ ಸುಟ್ಟು ಹೋಗಿದ್ದರು. ನಮ್ಮ ಮಗಳು ಕೂತಿದ್ದ ಸೀಟ್ ಸಮೀಪಕ್ಕೇ ಲಾರಿ ಡಿಕ್ಕಿಯಾಗಿದೆ. ಅವರು ಅದರೊಳಗೇ ಜ್ಞಾನ ತಪ್ಪಿದಾರೆ. ಹಾಗಾಗಿ ಅಲ್ಲೇ ಸುಟ್ಟು ಹೋಗಿದ್ದಾರೆ. ಮೃತದೇಹ ಕಂಡು ಹಿಡಿಯಲು ಆಗದ ರೀತಿ ಆಗಿತ್ತು ಎಂದು ಬಿಕ್ಕಿ ಬಿಕ್ಕಿ ಅತ್ತರು.

ಘಟನೆ ಸಂಭವಿಸುವ ಮುನ್ನ ರಾತ್ರಿ 8 ಗಂಟೆಗೆ ಬಸ್ ಹತ್ತಿದಾಗ ಅರ್ಧ ಗಂಟೆ ಮಾತಾಡಿದ್ದಳು. ಆದರೆ, ಬೆಳಿಗ್ಗೆ ಕರೆ ಮಾಡಿದರೆ ಸ್ವಿಚ್ ಆಫ್ ಆಗಿತ್ತು. ಏಪ್ರಿಲ್ 28–29ಕ್ಕೆ ನವ್ಯಳ ಮದುವೆ ನಿಶ್ಚಯ ಮಾಡಿದ್ದು, ಎಲ್ಲಾ ತಯಾರಿ ಮಾಡಿದ್ದೆವು. ಮಂಟಪ ಸಹ ಬುಕ್ ಮಾಡಲಾಗಿತ್ತು. ಜನವರಿ 25ಕ್ಕೆ ಬೆಂಗಳೂರಿನಲ್ಲಿ ನಿಶ್ಚಿತಾರ್ಥ ಕೂಡ ಮಾಡಬೇಕಿತ್ತು ಎಂದು ಮಗಳನ್ನು ನೆನೆದು ಗೋಳಾಡಿದರು.

## ಪಾನಮತ್ತ ಪಾಲಿಕೆ ಹೆಲ್ತ್‌ಇನ್‌ಸ್ಪೆಕ್ಟರ್ ಸಸ್ಪೆಂಡ್




• ಪ್ರಜೋದಯ ವರದಿ

**ಹಾಸನ:** ಪಾನಮತ್ತನಾಗಿ ಮಲಗಿದ್ದ ಮಹಾನಗರ ಪಾಲಿಕೆ ಆರೋಗ್ಯ ನಿರೀಕ್ಷಣಾಧಿಕಾರಿ ಪ್ರಸಾದ್ ಅವರ ವಿಡಿಯೋ ಸಾಮಾಜಿಕ ಜಾಲತಾಣ ಗಳಲ್ಲಿ ವೈರಲ್ ಆಗಿದ್ದ ಹಿನ್ನಲೆ ಸೇವೆಯಿಂದ ಅಮಾನತುಗೊಳಿಸ ಲಾಗಿದೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ನಿಯೋಜನೆ ಮೇರೆಗೆ ಮಹಾನಗರ ಪಾಲಿಕೆಯಲ್ಲಿ ಹೆಲ್ತ್‌ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರಸಾದ್ ಅವರು, ಸರ್ಕಾರದ ವಾಹನವನ್ನು ಬಳಸಿಕೊಂಡು ಮದ್ಯ ಸೇವನೆ ಮಾಡಿ ಮಲಗಿದ್ದ ವಿಡಿಯೋ ಸುದ್ದಿ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರವಾಗಿತ್ತು. ಈ ಹಿನ್ನಲೆ ಕರ್ತವ್ಯ ಲೋಪವಾಗಿರುವುದು ಕಂಡು ಬಂದ ಹಿನ್ನಲೆ ಡಿಹೆಚ್‌ಒ ಅಮಾನತ್ತುಗೊಳಿಸಿ ಆದೇಶ ಹೊರಡಿಸಿದ್ದಾರೆ.

## ಸ್ಥಳೀಯ ಸಂಸ್ಥೆ ಚುನಾವಣೆಗೆ ಮೈತ್ರಿ ಕಷ್ಟ

» ಮೊದಲನೇ ಪುಟದಿಂದ

ಕಠಿಣ ಕ್ರಮ ಕೈಗೊಳ್ಳಬೇಕು

ದೇಶದ ಕೆಲವು ರಾಜ್ಯಗಳಲ್ಲಿ ಚರ್ಚ್ ಮೇಲೆ ದಾಳಿಯಾಗಿರುವುದು ತುಂಬಾ ಹೇಯವಾದ ಘಟನೆ. ಅದನ್ನು ನಾವೆಲ್ಲರೂ ಖಂಡಿಸಬೇಕು. ಈ ದೇಶದಲ್ಲಿ ಎಲ್ಲಾ ಧರ್ಮೀಯರೂ ಇದ್ದಾರೆ. ಚರ್ಚ್ ಮೇಲಿನ ದಾಳಿಯ ಘಟನೆ ಆಗಬಾರದಿತ್ತು. ಆ ಘಟನೆಗೆ ಸಂಬಂಧಿಸಿದಂತೆ ಕಠಿಣ ಕ್ರಮ ಕೈಗೊಳ್ಳಬೇಕು. ಘಟನೆಗೆ ಕಾರಣರಾದವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಜರುಗಿಸಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯಲ್ಲಿ ಚರ್ಚ್‌ಗೆ ಹೋಗಿ ಪ್ರಾರ್ಥನೆ ಮಾಡಿದ್ದಾರೆ. ಅವರು ದಾಳಿ ಮಾಡಿದವರ ಮೇಲೆ ಕ್ರಮ ಕೈಗೊಳ್ಳುವುದರಲ್ಲಿ ಹಿಂದೆ ಸರಿಯುವುದಿಲ್ಲವೆಂದು ಭಾವಿಸುವುದಾಗಿ ತಿಳಿಸಿದರು.

ಶ್ಯಾಮನೂರು ಶಿವಶಂಕರಪ್ಪ ಮತ್ತು ತಮ್ಮ ನಡುವಿನ ಒಡನಾಟ 50 ವರ್ಷಗಳಷ್ಟು ಹಳೆಯದು. ಹಲವಾರು ವಿದ್ಯಾಸಂಸ್ಥೆ ಸ್ಥಾಪನೆ ಮಾಡಿದ್ದಾರೆ. ಅತ್ಯಂತ ಸಂಪನ್ನರು. ಅವರದು ಕೊಡುಗೈ. ಅವರ ಆತಕ್ಕೆ ಚಿರಶಾಂತಿ



ಸಿಗಲಿ, ಅವರ ಕುಟುಂಬಕ್ಕೆ ದುಃಖವನ್ನು ಭರಿಸುವ ಶಕ್ತಿ ನೀಡಲಿ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಟಿ.ಎ.ಶರವಣ, ಟಿ.ಎನ್.ಜವರಾಯಿಗೌಡ, ವಿಧಾನಪರಿಷತ್ ಮಾಜಿ ಸದಸ್ಯರಾದ ತಿಪ್ಪೆಸ್ವಾಮಿ, ರಮೇಶ್ ಗೌಡ, ಚೌಡರೆಡ್ಡಿ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಕೃಷ್ಣಾರೆಡ್ಡಿ, ಮಹಿಳಾ ಘಟಕದ ಅಧ್ಯಕ್ಷೆ ರಶಿ ರಾಮೇಗೌಡ, ಪಕ್ಷದ ಕಾನೂನು ಘಟಕದ ಅಧ್ಯಕ್ಷ ಎ.ಪಿ.ರಂಗನಾಥ್ ಇದ್ದರು.

### ಪದ್ಮಶ್ರೀ ಪುರಸ್ಕೃತ ಡಾ.ಸುಭಾಷ್ ಪಾಳೇಕರ್‌ರಿಂದ ಮಾಹಿತಿ: ಕಣಗಾಲ್ ಮೂರ್ತಿ

## ಜ.3ರಿಂದ ಪುಷ್ಪಗಿರಿಯಲ್ಲಿ ನೈಸರ್ಗಿಕ ಕೃಷಿ ಕಾರ್ಯಾಗಾರ

• ಪ್ರಜೋದಯ ವರದಿ

**ಹಾಸನ:** ಪದ್ಮಶ್ರೀ ಪುರಸ್ಕೃತರಾದ ಮಹಾರಾಷ್ಟ್ರದ ಡಾ.ಸುಭಾಷ್ ಪಾಳೇಕರ್ ಅವರಿಂದ ನೈಸರ್ಗಿಕ ಕೃಷಿ ಕುರಿತು ಜ.3 ರಿಂದ 4 ದಿನಗಳ ಕಾರ್ಯಾಗಾರವನ್ನು ಹಳೇಬೀಡಿನ ಪುಷ್ಪಗಿರಿ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ರೈತ ಮುಖಂಡ ಕಣಗಾಲ್ ಮೂರ್ತಿ ಅವರು ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.3 ರಿಂದ 6ರ ವರೆಗೆ ರೈತ ಸಂಘ ಹಾಗು ಹಸಿರು ಸೇನೆಯಿಂದ ಆಯೋಜಿಸಿರುವ ಕಾರ್ಯಾಗಾರದಲ್ಲಿ ಯಾವುದೇ ರಸಗೊಬ್ಬರ ಅಥವಾ ಕೀಟನಾಶಕ ಬಳಸದೆಯೇ, ಬೀಜದಿಂದ ಮಾರುಕಟ್ಟೆ ಯವರೆಗೆ ರೈತರು ಸ್ವಾವಲಂಬಿಗಳಾಗುವಂತೆ ಮಾಡುವುದು, ನೈಸರ್ಗಿಕ ಕೃಷಿ ಪದ್ಧತಿ ಬಗ್ಗೆ ರೈತರಿಗೆ ತಿಳಿಸಿಕೊಡಲಾಗುವುದು. ವೈಜ್ಞಾನಿಕ ಹಾಗು ಪ್ರಾಯೋಗಿಕ ಜ್ಞಾನವನ್ನು ಕಾರ್ಯಾಗಾರದಲ್ಲಿ ಭಾಗಿಯಾಗುವ ರೈತರಿಗೆ ನೀಡಲಾಗುವುದು ಎಂದರು.




ರೈತರು ಸಾಲದ ಸುಳಿಯಿಂದ ಹೊರಬರಲು, ಮಣ್ಣಿನ ಫಲವತ್ತತೆ ಹೆಚ್ಚಿಸಿ ರೋಗಮುಕ್ತ ಹಾಗೂ ಲಾಭದಾಯಕ ಬೆಳೆ ಬೆಳೆಯಲು ಪ್ರೇರೇಪಿಸುವುದು ಕಾರ್ಯಾಗಾರದ ಪ್ರಮುಖ ಉದ್ದೇಶವಾಗಿದೆ. ರಸಗೊಬ್ಬರಗಳ ಅವಲಂಬನೆಯಿಂದ ಉಂಟಾಗಿರುವ ನಷ್ಟ, ಸಾಲ ಮತ್ತು ಕೃಷಿಯಿಂದ ಯುವ ಜನರ ವಲಸೆ ಸೇರಿ ಹಲವು ಸಮಸ್ಯೆಗಳಿಗೆ ಪರ್ಯಾಯ ಮಾರ್ಗವಾಗಿ ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳುವಂತೆ ರೈತರಿಗೆ ಕರೆ ನೀಡಲಾಗುವುದೆಂದು ತಿಳಿಸಿದರು.

ಯಾವುದೇ ರಸಗೊಬ್ಬರವಿಲ್ಲದೆ ಯಶಸ್ವಿಯಾಗಿ ಕೃಷಿ ಮಾಡುತ್ತಿರುವ ಸಾಧಕ ರೈತರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ. ಶ್ರೀಲಂಕಾ, ವಿಯಟ್ನಾಂ, ನೆರೆಯ ಆಂಧ್ರ ಸೇರಿ ವಿವಿಧೆಡೆಗಳಿಂದ ನೂರಾರು ಮಂದಿ ರೈತರು ಭಾಗಿಯಾಗಲಿದ್ದಾರೆ. ನಾಲ್ಕು ದಿನಗಳವರೆಗೆ ಸಂಪೂರ್ಣ ನೈಸರ್ಗಿಕ ಕೃಷಿ ಪದ್ಧತಿ ಬಗ್ಗೆ ತರಬೇತಿ, ಪ್ರಯೋಜನ ಮನವರಿಕೆ ಮಾಡಿಕೊಡಲಾ ಗುವುದು ಎಂದರು.

ಕಾರ್ಯಾಗಾರದಲ್ಲಿ ಏಕ ಬೆಳೆ ಪದ್ಧತಿಯಿಂದ ಬಹು ಬೆಳೆ ಪದ್ಧತಿಯತ್ತಾ ಬದಲಾವಣೆ, ನಾಟಿ ಬೀಜಗಳ ಸಂರಕ್ಷಣೆ, ನಾಟಿ ಹಸುಗಳ ಸಗಣಿ ಹಾಗು ಗಂಜಲದಿಂದ ಜೀವಾಮೃತ, ಬೀಜಾಮೃತ ತಯಾರಿಕೆ, ರಾಸಾಯನಿಕ ಕೀಟನಾಶಕಗಳಿಗೆ ಪರ್ಯಾಯಗಳ ಬಳಕೆ, ಬೆಳೆಗಳ ಮೌಲ್ಯ ವರ್ಧನೆ ಮತ್ತು ಸಹಕಾರಿ ಮಾರಾಟ ವ್ಯವಸ್ಥೆಗಳ ಕುರಿತು ವಿವರವಾಗಿ ಮಾಹಿತಿ ನೀಡಲಾಗುವುದೆಂದು ತಿಳಿಸಿದರು.

ಕಾರ್ಯಾಗಾರಕ್ಕೆ ನೋಂದಣಿ ಶುಲ್ಕವಾಗಿ ನಾಲ್ಕು ದಿನಗಳ ಊಟ–ವಸತಿ ಸೇರಿ ಒಬ್ಬರಿಗೆ 800 ನಿಗದಿ ಪಡಿಸಲಾಗಿದೆ. ಊಟ ಮತ್ತು ವಸತಿ ಸರಳವಾಗಿರುತ್ತದೆ. ಪ್ರತ್ಯೇಕ ವಸತಿ ವ್ಯವಸ್ಥೆ ಯನ್ನು ಅಗತ್ಯವಿರುವವರು ಮಾಡಿಕೊಳ್ಳಬಹುದು. ಕಡೆಯ ದಿನ ಜಿಲ್ಲೆಯ ಪ್ರಗತಿಪರ ಕೃಷಿಕರನ್ನು ಭೇಟಿ ಮಾಡುವ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಜಾನಪದ ಕಲಾವಿದ ಗ್ಯಾರಂಟಿ ರಾಮಣ್ಣ ಅವರು ಮಾತನಾಡಿ, ಇಂದು ರೈತರು ರಾಸಾ ಯನಿಕ ಗೊಬ್ಬರಗಳ ಗುಲಾಮರಾಗಿದ್ದಾರೆ. ಅದರಿಂದ ಭೂಮಿಯ ಫಲವತ್ತತೆ ಹಾಳಾಗುವು ದಲ್ಲದೇ ರೈತರು ಸಾಲಗಾರರಾಗಿ ಬದುಕನ್ನು ಅಂತ್ಯಗೊಳಿಸಿಕೊಳ್ಳುವಂತಾಗಿದೆ. ಇಂತಹ ವಾತಾವರಣ ಹೋಗಲಾಡಿಸಿ, ನೈಸರ್ಗಿಕ ಕೃಷಿ ಅಳವಡಿಸಿಕೊಂಡು ಎಲ್ಲರೂ ಸ್ಥಿತಿವಂತರಾಗ ಬೇಕೆಂದು ಪ್ರೇರೇಪಿಸುವುದು ಈ ಕಾರ್ಯಾಗಾರದ ಮೂಲ ಉದ್ದೇಶ ಎಂದು ಹೇಳಿದರು.

ಮಂಜು ಬಿಟ್ಟಗೋಡನಹಳ್ಳಿ, ಮರ್ಕುಲಿ ಪ್ರಕಾಶ್, ಸುರೇಶ್, ರಾಜಣ್ಣ ಇದ್ದರು.

## ದೇವೇಗೌಡರ ನೇತೃತ್ವದಲ್ಲಿ ಡಿ.29ರಂದು ಜೆಡಿಎಸ್ ಕಾರ್ಯಕರ್ತರ ಸಭೆ

» ಮೊದಲನೇ ಪುಟದಿಂದ

ಮಾಡುತ್ತಾರೆ. ನಾವು ರೇವಣ್ಣ ಅವರ ನಾಯಕತ್ವದಲ್ಲಿ ಪಕ್ಷ ಸಂಘಟನೆ ಮಾಡುತ್ತೇವೆ. ಜಿಲ್ಲೆಯಲ್ಲಿ ಬಿಜೆಪಿ ಇದೆ, ಇಬ್ಬರು ಶಾಸಕರಿದ್ದಾರೆ. ಹಾಗಾಗಿ ಇದು ರಾಷ್ಟ್ರೀಯ ನಾಯಕರು ತೀರ್ಮಾನ ಮಾಡುವ ವಿಚಾರ, ವೈಯಕ್ತಿಕವಾಗಿ ಹೇಳುವುದಾದರೆ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ವ್ಯತ್ಯಾಸ ಆಗಲಿದೆ. ಹಾಗಾಗಿ ಹೊಂದಾಣಿಕೆ ಬೇಡ. ಏಕೆಂದರೆ ನಮ್ಮ ಪಕ್ಷದ ಕಾರ್ಯಕರ್ತರು ಗಟ್ಟಿಯಾಗಿದ್ದಾರೆ. ಜೆಡಿಎಸ್‌ಗೆ ಬಲ ತುಂಬಲಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಮುಂದುವರಿಯಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಪಕ್ಷದ ಮುಖಂಡ ಹೊನ್ನವಳ್ಳಿ ಸತೀಶ್, ಮಾಜಿ ಮೇಯರ್ ಗಿರೀಶ್ ಚನ್ನವೀರಪ್ಪ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಎಸ್.ದ್ಯಾವೇಗೌಡ, ಆಲೂರು ತಾಲ್ಲೂಕು ಅಧ್ಯಕ್ಷ ಕೆ.ಎಸ್. ಮಂಜೇಗೌಡ, ಸಮೀರ್ ಅಹಮದ್, ಜಿಲ್ಲಾ ಜೆಡಿಎಸ್ ವಕ್ತಾರ ರಘು ಹೊಂಗೆರೆ ಇದ್ದರು.



**ಹಾಸನ: ತಾಲ್ಲೂಕಿನ ಕಟ್ಟಾಯ ಹೋಬಳಿ ಶೆಟ್ಟಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಊರಮಂದೆ ಹೊಸಹಳ್ಳಿಯಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನ ಕಾಮಗಾರಿಗೆ ಶಾಸಕ ಸಿಮೆಂಟ್ ಮಂಜು ಅವರು ಭೂಮಿ ಪೂಜೆ ನೆರವೇರಿಸಿದರು. ಸ್ಥಳೀಯ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.**

## ಕೆ.ವಿ.ಅಣ್ಣಯ್ಯ ಶೆಟ್ಟಿ ನಿಧನ

• ಪ್ರಜೋದಯ ವರದಿ



**ಹಾಸನ:** ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಹಿರಿಯ ಸದಸ್ಯ, ಬಿಜಿಕೆ ಮಾರ್ಕೆಟಿಂಗ್‌ನ ಕೆ.ವಿ.ಅಣ್ಣಯ್ಯ ಶೆಟ್ಟಿ ಅವರು ಶುಕ್ರವಾರ ನಿಧನರಾದರು. ನಗರದ ಉತ್ತರ ಬಡಾವಣೆಯಲ್ಲಿರುವ ಖೌಸ್ತುಬ ನಿಲಯದಲ್ಲಿ ಮೃತದ ಅಂತಿಮ ದರ್ಶನಕ್ಕೆ ಅವಕಾಶ ನೀಡಲಾಗಿದೆ. ಶನಿವಾರ ಬೆಳಿಗ್ಗೆ 11.30ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

## ಮಂತ್ರಿ ಸ್ಥಾನ ಖಚಿತ: ಕೆ.ಎಂ.ಶಿವಲಿಂಗೇಗೌಡ

• ಪ್ರಜೋದಯ ವರದಿ

**ಅರಸೀಕೆರೆ:** ಮಂತ್ರಿಯಾಗುವ ಸುಸಂದರ್ಭವನ್ನು ನಿಲ್ಲಿಸಕ್ಕೆ ಆಗುವುದಿಲ್ಲ, ಅನಿವಾರ್ಯ ಕಾರಣಗಳಿಂದ ನಿಧಾನವಾಗಿರಬಹುದು. ಹತ್ತಾರು ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹೇಳಿದಂತೆ ಮಂತ್ರಿ ಸ್ಥಾನ ಒಲಿದೇ ಒಲಿಯುತ್ತದೆಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಹೇಳಿದರು.

ನಗರದ ಹೊರವಲಯದ ಮಾಲೇಕಲ್ಲು ತಿರುಪತಿಯಲ್ಲಿ ನಡೆದ ಕನಕ ನೌಕರರ ಕ್ಷೇಮಾಭಿ ವೃದ್ಧಿ ಸಂಘದ 17ನೇ ವರ್ಷದ ವಾರ್ಷಿಕ ಮಹಾಸಭೆ, ಪ್ರತಿಭಾ ಪುರಸ್ಕಾರ, ಪ್ರಗತಿಪರ ರೈತರು, ಉತ್ತಮ ಕುರಿಗಾಹಿ ಹಾಗೂ ನಿವೃತ್ತ ನೌಕಕರ ಸನ್ಮಾನ ಸಮಾರಂಭವನ್ನು ಕನಕದಾಸರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಅರಸೀಕೆರೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವ ಉದ್ದೇಶದಿಂದ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದೆ. ಅರಸೀಕೆರೆ ಕ್ಷೇತ್ರದ ನೀರಾವರಿ ಯೋಜನೆ ಈಡೇರಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಕಾರಣ. ಅವರ ಸಹಕಾರದಿಂದಲೇ ಕ್ಷೇತ್ರದ



ಅಭಿವೃದ್ಧಿ ಸಾಧ್ಯವಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸ್ವತಃ ಹಾಸನ, ಅರಸೀಕೆರೆ ಹಾಗೂ ಬಾಣಾವಾರ ಸೇರಿ ಹತ್ತಾರು ಬಾರಿ ಭೇಟಿ ನೀಡಿದಾಗ, ಶಿವಲಿಂಗೇಗೌಡರನ್ನು ಮಂತ್ರಿಯನ್ನಾಗಿ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಕೆಲವು ವಿದ್ಯಮಾನಗಳಿಂದ ನಿಧಾನವಾಗಿದೆ ಎಂದರು.


ಆಧುನೀಕರಣದಲ್ಲಿ ಸಮಾಜದ ಏಳಿಗೆಗೆ ಕೆಲವು ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಸಮಾಜದ ಹಿತದೃಷ್ಟಿಯಿಂದ ಸಂಘಟಿತರಾಗಬೇಕು. ಸಮಾಜದಲ್ಲಿನ ಜನರನ್ನು ಎಚ್ಚರಿಸುವ ಕೆಲಸ ಮಾಡಬೇಕು. ಸ್ವಾರ್ಥ ಸಾಧನೆಗೆ ಸಮಾಜದ ಸ್ವಾಸ್ಥ್ಯ ಹಾಳ ಮಾಡಬಾರದು. ಕನಕ ನೌಕರರ ಸಂಘವು ಉತ್ತಮವಾಗಿದ್ದು, ಒಳ್ಳೆಯ ಕೆಲಸ ಮಾಡುತ್ತಾ ಬಂದಿದ್ದೀರಿ. ನನ್ನ ಸತತ ಗೆಲುವಿಗೆ ನಿಮ್ಮ ಸಮಾಜದ ಕೊಡುಗೆ ಸ್ಮರಣೀಯ. ನಿಮ್ಮ ಶ್ರೇಯೋಭಿವೃದ್ಧಿಗೆ ಶ್ರಮಿಸುವೆ ಎಂದರು.

ಕ್ಷೇತ್ರದ ಪವಿತ್ರ ಸ್ಥಳ ಗಂಗಾಧರೇಶ್ವರನ ಗಂಗೆ ಮಡುವಿನ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುವೆ. ಅದರ ಜೀರ್ಣೋದ್ಧಾರದ ಕುರಿತು ಸ್ವಾಮೀಜಿ ಬಳಿ ಮಾತನಾಡುವೆ. ನಗರದ ಬಸ್ ನಿಲ್ದಾಣದ ಬಳಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ನಿರ್ಮಾಣದ ಕೆಲಸ ನಡೆ ಯುತ್ತಿದೆ. ಸಮಾಜಮುಖಿ ಕೆಲಸಕ್ಕೆ ಯಾವಾಗಲೂ ಮುಂದೆ ಇರುತ್ತೇನೆಂದು ಹೇಳಿದರು.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ ಅವರು ಮಾತನಾಡಿ, ಸಮಾಜದ ಅಭಿವೃದ್ಧಿಗಾಗಿ ಇಂತಹ ಕಾರ್ಯಕ್ರಮ ನಡೆಯುತ್ತಿರಬೇಕು. ಸಮಾಜದಲ್ಲಿ ನಾವು ಒಗ್ಗಟ್ಟಿನಿಂದ ಇದ್ದಾಗ ಮಾತ್ರ ಸರ್ಕಾರದ ಸೌಲಭ್ಯಗಳನ್ನು ಪಡೆಯಲುಸಾಧ್ಯ ಎಂದರು.

ಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎಸ್.ಬಸವರಾಜು, ಗೌರವಾಧ್ಯಕ್ಷ ಭೂದೇವಸ್ವಾಮಿ ಒಡೆಯರ್, ಪ್ರಾಥಮಿಕ ಶಾಲಾ ಶಿಕ್ಷಣ ಸಂಘದ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ, ಮೈಸೂರಿನ ಶಾಲಾ ಶಿಕ್ಷಣ ಇಲಾಖೆ ಸಹ ನಿರ್ದೇಶಕ ಕೆ.ಎಸ್.ಪ್ರಕಾಶ್, ಜಿಲ್ಲಾ ಉಪ ನಿರ್ದೇಶಕ ರಂಗನಾಥಸ್ವಾಮಿ, ಶಿಕ್ಷಣ ಅಧಿಕಾರಿ ಹೆಚ್.ಎಸ್.ಚಂದ್ರಶೇಖರ್, ತಾಲ್ಲೂಕು ಆರೋಗ್ಯಾಧಿಕಾರಿ ರಂಗನಾಥ್, ಕ್ಷೇತ್ರಶಿಕ್ಷಣಾಧಿಕಾರಿ ಮೋಹನ್ ಕುಮಾರ್, ಕುರುಬರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಕೃಷ್ಣಮೂರ್ತಿ, ಕಾರ್ಯಕಾರಿ ಮಂಡಳಿ ಕಾರ್ಯಾಧ್ಯಕ್ಷ ರಾಮಚಂದ್ರ, ಉಪಾಧ್ಯಕ್ಷ ನಿಜಗುಣ, ಕಾರ್ಯದರ್ಶಿ ರವಿಕುಮಾರ್, ಖಜಾಂಚಿ ಗೋವಿಂದಸ್ವಾಮಿ, ಸಹ ಕಾರ್ಯದರ್ಶಿ ಲೋಕೇಶ್, ನಿರ್ದೇಶಕರು, ಹಿರಿಯ ನೌಕರರು ಇತರರು ಇದ್ದರು.

## ಸರ್ಕಾರಿ ಶಾಲೆಗಳ ಬಲವರ್ಧನೆ ಅಗತ್ಯ: ಸದಾಶಿವ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಆರೋಗ್ಯಕರ ಸಮಾಜ ನಿರ್ಮಾಣಕ್ಕಾಗಿ ತುಡಿ ಯುವ ಸಂಘ–ಸಂಸ್ಥೆಗಳುಹಾಗು ಶ್ರೀಮಂತರು ಅಗತ್ಯ ಸೌಲಭ್ಯಗ ಳೊಂದಿಗೆ ಹೆಚ್ಚಿನ ಸಹಕಾರ ನೀಡುವ ಮೂಲಕ ಸರ್ಕಾರಿ ಶಾಲೆಗಳ ಬಲವರ್ಧನೆಗೆ ಮುಂದಾಗಬೇಕೆಂದು ಮೆಂಡ ಫೌಂಡೇಷನ್ ವ್ಯವಸ್ಥಾಪಕ ವಿ.ಎಸ್.ಸದಾಶಿವ ಅವರು ಹೇಳಿದರು.

ತಾಲ್ಲೂಕಿನ ಮೂಕಿಕೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೆಂಗಳೂರಿನ ಮೆಂಡ ಫೌಂಡೇಷನ್ ಹಾಗು ಸೆಲ್ಕೋ ಸೋಲಾರ್ ಕಂಪನಿಯಿಂದ 1.20 ಲಕ್ಷ ರೂ. ಮೌಲ್ಯದ ಸ್ಮಾರ್ಟ್ ಕ್ಲಾಸ್ ಪರಿಕರ ವಿತರಿಸಿ ಮಾತನಾಡಿ, ಆಧುನಿಕ ತಂತ್ರಜ್ಞಾನ ಪರಿಕರಗಳನ್ನು ಕಲ್ಪಿಸುವ ಮೂಲಕ ಸರ್ಕಾರಿ ಶಾಲೆಗಳ ಶೈಕ್ಷಣಿಕ ವ್ಯವಸ್ಥೆಯ ಬಲವರ್ಧನೆ ಮಾಡುವುದು ನಮ್ಮ ಸಂಸ್ಥೆಯ ಮುಖ್ಯ ಉದ್ದೇಶ ವಾಗಿದೆ. ಈಗಾಗಲೇ ಅನೇಕ ಸರ್ಕಾರಿ ಶಾಲೆಗಳಿಗೆ ನೆರವು ನೀಡಲಾಗಿದೆಯೆಂದರು.

ಎಸ್‌ಡಿಎಂಸಿ ಅಧ್ಯಕ್ಷೆ ಮಣಿ ಅವರು ಮಾತನಾಡಿ, ಹಾಜರಾತಿ ಕೊರತೆ ಸೇರಿ ಮತ್ತಿತರ ಕಾರಣಗಳಿಂದ ನೂರಾರು ಸರ್ಕಾರಿ ಶಾಲೆಗಳು ಬಾಗಿಲು ಮುಚ್ಚುವ ಸ್ಥಿತಿಗೆ ತಲುಪಿವೆ. ಹಿರಿಯ ವಿದ್ಯಾರ್ಥಿಗಳು ಸಂಘ ಸ್ಥಾಪನೆ ಮಾಡಿಕೊಂಡು ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಕ್ರಮ ವಹಿಸಬೇಕೆಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಎನ್.ದೀಪಾ, ಸಮನ್ವಯಧಿಕಾರಿ ಅನಿಲ್, ಶಿಕ್ಷಣ ಸಂಯೋಜಕ ಶ್ರೀನಿವಾಸ್, ಸಿಆರ್‌ಪಿ ಮಂಜುನಾಥ್, ಮುಖ್ಯ ಶಿಕ್ಷಕ ಜೆ.ಹೆಚ್.ಶ್ರೀಕಾಂತ್, ಸಹ ಶಿಕ್ಷಕ ಕೆಂಪೇಗೌಡ, ಸೌಮ್ಯ, ಕುಮಾರ್, ರಮ್ಯ, ಸಿಬ್ಬಂದಿ ಹಾಗು ಇತರರಿದ್ದರು.

## ಮ್ಯಾನ್ಮಾರ್: ಡಿ.28ಕ್ಕೆ ಮೊದಲ ಹಂತದ ಚುನಾವಣೆ

**ಬ್ಯಾಂಕಾಕ್:** ಮ್ಯಾನ್ಮಾರ್‌ನಲ್ಲಿ ಐದು ವರ್ಷಗಳ ಬಳಿಕ ಸಾರ್ವತ್ರಿಕ ಚುನಾವಣೆ ನಡೆಯುತ್ತಿದ್ದು, ಮೊದಲ ಹಂತದ ಚುನಾವಣೆಯು ಡಿ.28ರಂದು ನಡೆಯಲಿದೆ.

ಸೇನೆಯು ಈ ಚುನಾವಣೆಯನ್ನು ಬಹುಪಕ್ಷೀಯ ಪ್ರಜಾಪ್ರಭುತ್ವಕ್ಕೆ ಮರಳುವಿಕೆ ಎಂದು ಹೇಳಿದೆ. ದೇಶದ ವಿವಿಧ ಭಾಗಗಳಲ್ಲಿ ಮೂರು ಹಂತಗಳಲ್ಲಿ ಮತದಾನ ನಡೆಯಲಿದ್ದು, 2ನೇ ಹಂತ ಜ.11ರಂದು ಮತ್ತು 3ನೇ ಹಂತ ಜ.25ರಂದು ನಡೆಯಲಿದೆ.

2021ರಲ್ಲಿ ಆಂಗ್ ಸಾನ್ ಸೂಕಿ ನೇತೃತ್ವದ ಚುನಾಯಿತ ಸರ್ಕಾರವನ್ನು ಪದಚ್ಯುತಗೊಳಿಸಿ ಸೇನೆಯೂ ಅಧಿಕಾರ ವಹಿಸಿಕೊಂಡಿದ್ದು, ಜನ ವಿರೋಧಕ್ಕೆ ಕಾರಣವಾಯಿತು. ಅದು ಮುಂದೆ ಅಂತರ್ಯುದ್ಧವಾಗಿ ಬೆಳೆಯಿತು. ಅದರಿಂದ ಅನೇಕ ಪ್ರದೇಶಗಳಲ್ಲಿ ಚುನಾವಣೆ ನಡೆಸುವುದು ಕಷ್ಟವಾಗಿ ಪರಿಣಮಿಸಿತ್ತು. ಮತದಾನವು ಮುಕ್ತ ಅಥವಾ ನ್ಯಾಯಯುತವಾಗಿರುವುದಿಲ್ಲ ಮತ್ತು ಅಧಿಕಾರವು ಮಿಲಿ ಟರಿ ನಾಯಕರ ಕೈಯಲ್ಲಿ ಉಳಿಯುವ ಸಾಧ್ಯತೆಯಿದೆ ಎಂದು ಮಾನವ ಹಕ್ಕುಗಳ ಗುಂಪು ಮತ್ತು ಇತರ ಸಂಘಟನೆಗಳು ಹೇಳಿವೆ.

## 8ನೇ ವರ್ಷದ ಪಾದಯಾತ್ರೆಗೆ ಮಂಜು ಚಾಲನೆ

• ಪ್ರಜೋದಯ ವರದಿ

**ಅರಕಲಗೂಡು:** ಧರ್ಮಸ್ಥಳ ಪಾದಯಾತ್ರೆ ವೇಳೆ ಹವಾಮಾನ ವೈಪರೀತ್ಯದಿಂದ ಶೀತಗಾಳಿ ಹಾಗೂ ಕೊರೆಯುವ ಚಳಿ ಹೆಚ್ಚಾಗಿರುವುದರಿಂದ ಯಾತ್ರಿಗಳ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ. ಹೀಗಾಗಿ ಮೂರು ದಿನಗಳ ಕಾಲ ಪಾದಯಾತ್ರೆ ಕೈಗೊಳ್ಳುವ ಯಾತ್ರಿಗಳು ಕಡ್ಡಾಯವಾಗಿ ಬೆಚ್ಚನೆಯ ಉಡುಪು ಹಾಗೂ ಪರಿಕರಗಳನ್ನು ಬಳಸಿಕೊಂಡು ಯಾತ್ರೆ ನಡೆಸಬೇಕೆಂದು ಶಾಸಕ ಎ. ಮಂಜು ಅವರು ಸಲಹೆ ನೀಡಿದರು.

ಪಟ್ಟಣದ ದೊಡ್ಡಮ್ಮ ದೇವಾಲಯ ಆವರಣದಲ್ಲಿ ಶುಕ್ರವಾರ ಎ.ಮಂಜು ಅಭಿಮಾನಿಗಳ ಬಳಗ ಹಾಗೂ ಶ್ರೀ ಮಂಜುನಾಥ ಧರ್ಮಸ್ಥಳ ಪಾದಯಾತ್ರಾ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಧಾರ್ಮಿಕ ಸಭೆ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅಭಿಮಾನಿಗಳ ಬಳಗ ಆಯೋಜಿಸಿರುವ ಈ ಪಾದಯಾತ್ರೆ 8ನೇ ವರ್ಷದ ಪಾದಯಾತ್ರೆಯಾಗಿದ್ದು, ಈ ಬಾರಿ ವಿಶೇಷವಾಗಿ ಧರ್ಮಸ್ಥಳದ ಮಂಜುನಾಥಸ್ವಾಮಿ



ನೇರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಪಾದಯಾತ್ರೆ ಯಲ್ಲಿ ಭಾಗವಹಿಸುವ ಎಲ್ಲಾ ಯಾತ್ರಿಗಳು ಸಮಿತಿಯಿಂದ ಪಡೆದಿರುವ ರಶೀದಿಯನ್ನು ಕಡ್ಡಾಯವಾಗಿ ತಮ್ಮ ಬಳಿ ಇಟ್ಟುಕೊಳ್ಳ ಬೇಕೆಂದು ಸೂಚಿಸಿದರು.

ಮೂರು ದಿನಗಳ ಪಾದಯಾತ್ರೆಯನ್ನು ಹಗಲು ಹಾಗೂ ಮಧ್ಯಾಹ್ನ ಸಮಯದಲ್ಲೇ ಕೈಗೊಳ್ಳುವುದು ಸೂಕ್ತ. ಯಾವುದೇ ಕಾರಣಕ್ಕೂ ರಾತ್ರಿ ಸಮಯದಲ್ಲಿ ಪಾದಯಾತ್ರೆ ನಡೆಸ ಬಾರದು. ವಾಹನ ದಟ್ಟಣೆ ಹಾಗೂ ಕತ್ತಲು ನಡುವೆ ಯಾತ್ರೆ ಕೈಗೊಂಡರೆ ಅನಾಹುತಗಳ ಸಂಭವ ಹೆಚ್ಚಿರುವುದರಿಂದ ಯಾತ್ರಿಗಳು ಮುನ್ನೆಚ್ಚರಿಕೆ ವಹಿಸಬೇಕೆಂದರು.

2 ಸಾವಿರಕ್ಕೂ ಹೆಚ್ಚು ಯಾತ್ರಿಗಳಿಗೆ ಅನ್ನ ಸಂತರ್ಪಣೆ ಮಾಡಲಾಯಿತು.

ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಹೊನ್ನವಳ್ಳಿ ಸತೀಶ್, ತಾಲ್ಲೂಕು ನೌಕರರ ಸಂಘದ ಅಧ್ಯಕ್ಷ ಪುಟ್ಟರಾಜ್, ಕ.ರಾ. ರೈತ ಕಲ್ಯಾಣ ಸಂಘದ ಕಾರ್ಯಾಧ್ಯಕ್ಷ ಲೋಕೇಶ್, ಸಮಿತಿ ಗೌರವಾಧ್ಯಕ್ಷ ವೆಂಕಟೇಶ್ ಶ್ರೀರಾಂಪುರ, ಅಧ್ಯಕ್ಷ ಅನಂದ್ ಮೋಕಳಿ, ಸಮಿತಿ ಸದಸ್ಯರಾದ ಅಶೋಕ್ ಕೋಡಕಹಳ್ಳಿ, ರವಿಕುಮಾರ್, ಎ.ಎಂ.ರಘು, ಗಣೇಶ್ ಬಾಣದಹಳ್ಳಿ, ಕಾಕೋಡನಹಳ್ಳಿ ಮಂಜು, ಕಾರ್ತಿಕ್ ಅರಸ್, ಮಳಲೀಕೆರೆ ಶಿವು ಇದ್ದರು.

## ಬರಡು ಭೂಮಿಯಲ್ಲಿ ಚಿನ್ನದಂತ ಬೆಳೆ ಬೆಳೆದ ರೈತ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಎತ್ತ ನೋಡಿದರತ್ತ ಕಲ್ಲು ಬಂಡೆ, ಗಿಡಗಂಟಿಗಳಿಂದ ತುಂಬಿದ್ದ ಕಾಡು ಪ್ರದೇಶವು ರೈತನ ನಿರಂತರ ಶ್ರಮದ ಫಲವಾಗಿ ಕೃಷಿ ಜಮೀನಾಗಿ ಮಾರ್ಪಟ್ಟಿದ್ದು ಸಾವಯವ ಪದ್ಧತಿಯ ಮಿಶ್ರ ಬೆಳೆ ಮೂಲಕ ಬಂಗಾರದ ಬೆಳೆ ಕೈ ಸೇರುತ್ತಿದೆ.

ಇದು ತಾಲ್ಲೂಕಿನ ಹೂವಿನಹಳ್ಳಿ ಗ್ರಾಮದ ಹೆಚ್.ಬಿ.ಮಂಜುನಾಥ್ ಅವರ ಯಶೋಗಾಥೆ. ತಮಗಿರುವ 2 ಎಕರೆ 25 ಗುಂಟೆ ಕೃಷಿ ಜಮೀನಿನಲ್ಲಿ 140 ತೆಂಗು, 600 ಅಡಿಕೆ, 110 ಹಿಮಾ ಸಾಗರ ಮಾವಿನ ಮರ, ಏಲಕ್ಕಿ, ಮೆಣಸು, ಸಪೋಟಾ, ವಾಟರ್ ಆಪಲ್, ಸೀಬೆ, ನಿಂಬೆ ಸೇರಿ ವಿವಿಧ ಬಗೆಯ ಹಣ್ಣಿನ ಗಿಡಗಳನ್ನು ಬೆಳೆದಿದ್ದಾರೆ.

ಅದಕ್ಕೂ ಮೊದಲು ಜಮೀನಿನ ಅಲ್ಲಲ್ಲಿ ಕಲ್ಲು ಬಂಡೆಗಳು ಇದ್ದು ಕಾರೆ ಗುಚ್ಚಿ ಸೇರಿ ವಿವಿಧ ಜಾತಿಯ ಗಿಡಗಂಟಿ ಬೆಳೆದು ಬೋರೆ ಪ್ರದೇಶದಂತೆ ಕಾಣುತಿತ್ತು. ಮಂಜುನಾಥ್ ಅವರು ಜೆಸಿಬಿ ಹಾಗು ಇತರೆ ಯಂತ್ರಗಳ ಸಹಾಯದಿಂದ ಎಲ್ಲವನ್ನೂ ತೆರವುಗೊಳಿಸಿ ಹಸಿರು ಕ್ರಾಂತಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.



ತಮ್ಮ ಜಮೀನಿನಲ್ಲಿ ಅಳವಡಿಸಿರುವ ಎಲ್ಲಾ ಬೆಳೆಗಳಿಗೂ ಹನಿ ನೀರಾವರಿ ಪದ್ಧತಿಯೊಂದಿಗೆ ನೀರುಣಿಸುವ ವ್ಯವಸ್ಥೆ ಮಾಡಲಾಗಿದೆ. ಕಳೆದ 8 ವರ್ಷಗಳಿಂದ ಯಾವ ರಾಸಾಯನಿಕ ಗೊಬ್ಬರ ಹಾಗು ಔಷಧ ಬಳಸದೆ ಸಾವಯವ ಕೃಷಿ ಅನುಸರಿಸಿದ್ದಾರೆ.

ಜಮೀನಿನಲ್ಲಿ ಒಂದಷ್ಟು ಭಾಗ ವನ್ನು ಕೈದೋಟ ಮಾಡಿಕೊಂಡು ಸೊಪ್ಪು ಹಾಗು ತರಕಾರಿ ಬೆಳೆಯುತ್ತಿದ್ದಾರೆ.

ಎರಡು ಮಲೆನಾಡು ಗಿಡ್ಡ ಹಸು, ಅಮ್ಮಿಘಡ ಹಾಗು ಡಾರ್ಫರ್ ಕುರಿಗಳನ್ನು ಸಾಕಿದ್ದು ತಮ್ಮ ಜಮೀನಿಗೆ ಸಾಕಾಗುವಷ್ಟು ಕೊಟ್ಟಿಗೆ ಗೊಬ್ಬರ ಪಡೆಯುತ್ತಿದ್ದಾರೆ. ಅನಿವಾರ್ಯ ಇದ್ದಲ್ಲಿ ವರ್ಷದಲ್ಲಿ ಒಂದೆರಡು ಬಾರಿ ಬೇರೆ ರೈತರಿಂದ ತಿಪ್ಪೆ ಗೊಬ್ಬರ ಖರೀದಿಸಿ ಬೆಳೆಗಳಿಗೆ ನೀಡುವ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಅಮ್ಮಿಘಡ ಹಾಗು ಡಾರ್ಫರ್ ಸೇರಿ ವಿವಿಧ ತಳಿಯ ಕುರಿಗಳನ್ನು ಸಾಕಿದ್ದು, ಹೊಸ ಹೊಸ ತಳಿಯ ಕುರಿಗಳನ್ನು ತಂದು ಅಭಿವೃದ್ಧಿಗೊಳಿಸುವ ಉದ್ದೇಶ ಹೊಂದಿದ್ದಾರೆ. ಕಳೆದ ಹತ್ತು ವರ್ಷಗಳ ಹಿಂದೆ ಯಾವ ಬೆಳೆಗಳಿಂದ ಹೆಚ್ಚು ಲಾಭ ಸಿಗುತ್ತಿರಲಿಲ್ಲ. ಆದರೆ ಸಾವಯುವ ಕೃಷಿ ಅನುಸರಿಸಿದ ನಂತರ ಎಲ್ಲಾ ಬೆಳೆಗಳಲ್ಲಿಯೂ ಹೆಚ್ಚಿನ ಇಳುವರಿಯೊಂದಿಗೆ ಸಾಕಷ್ಟು ಲಾಭ ಸಿಗುತ್ತದೆಎಂದು ರೈತ ಮಂಜುನಾಥ್ ತಿಳಿಸಿದರು.

ರೈತರು ಯಾವುದೋ ಒಂದು ಬೆಳೆಗೆ ಸೀಮಿತವಾಗಬಾರದು. ಜಮೀ ನಿನಲ್ಲಿ ಸಾಕಷ್ಟು ಗಿಡ ಮರಗಳನ್ನು ಬೆಳೆಸುವ ಮೂಲಕ ಸಮಗ್ರ ಕೃಷಿಗೆ ಆದ್ಯತೆ ನೀಡಬೇಕು. ಸಾವಯವ ಕೃಷಿ ಯಿಂದ ಭೂಮಿಯು ಕ್ಷೇಮ ಹಾಗು ಮನುಷ್ಯನ ಆರೋಗ್ಯವು ಉತ್ತಮವಾ ಗಿರುತ್ತದೆ. ಜೊತೆಗೆ ಮನೆಯ ಆರ್ಥಿಕ ಸದೃಢತೆಗೆ ಅನುಗುಣವಾಗಿ ಕುರಿ ಹಾಗು ಮೇಕೆಗಳನ್ನು ಸಾಕುವುದು ಒಳ್ಳೆಯ ಬೆಳವಣಿಗೆ ಎಂದು ಹೇಳಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172–231188, ಮೊ: 9449203019